Mr. SPEAKER.—If the Government amendment is accepted, then the amendments of Sri Imam and Sri Kolkebail will not survive.

The question is :

'In clause 12

(1) in the heading, after the words "daily allowances of " a comma and the words "and medical facilities to," shall be inserted ;

(2) in sub-clause (*a*) for the words "one single fare of the highest class or of the class by which the member actually travels," the words "one single first class fare (irrespective of the class by which the member actually travels)," shall be substituted ;

(3) after sub-clause (*b*), the following sub-clause shall be inserted, and the existing sub-clauses (*c*) and (*d*) shall be relettered as sub-clauses (*d*) and (*e*) respectively :—

"(*c*) members entitled to travelling allowance under clause (*a*) shall, at the place at which their attendance is required, be entitled free of charge to accommodation in hospitals maintained by the State Government and to medical attendance and treatment."

The motion was adopted.

Mr. SPEAKER.—The question is :

"Clause 12, as amended, stand part of the Bill."

The motion was adopted.

Clause 12 as amended was added to the Bill.

Mr. SPEAKER.—Clauses 13 to 16, Clause 1 the title and Preamble. The question is ;

"Clauses 13, 14, 15 and 16 and Clause 1, the Title and the Preamble stand part of the Bill."

The motion was adopted.

Clauses 13, 14, 15, and 16 and Clause 1, the Title and the Preamble were added to the Bill .

Motion to Pass.

Sri M. V. RAMA RAO.—Sir, I beg to move :

"That the Mysore Legislature Salaries Bill, 1956, as amended, be passed."

Mr. SPEAKER.—The question is :

"That the Mysore Legislature Salaries Bill, 1956, as amended, be passed."

The motion was adopted.

MYSORE KHADI AND VILLAGE INDUSTRIES BILL, 1956

4 P.M.

Sri C. M. POONACHA (Minister for Industries).—Sir, I move :

"That the Mysore Khadi and Village Industries Bill, 1956 be taken into consideration."

Sir, in moving this Bill, for the consideration of this House, by way of a few preliminary remarks, I wish to inform the Hon'ble House that a similar Bill was discussed by the previous Mysore Assembly and passed. For want of sufficient time, that Bill could not become law and as such this measure has come up for consideration again.

After the formation of the New State of Mysore, it has become necessary to pass this Bill now with a view to further the purposes for which the original Bill was brought up. We have similar Acts in force and Boards constituted in different States, namely, Bombay, Bihar, and the former State of Hyderabad. These Boards are functioning in these areas at the moment and in the old Mysore State area and for the areas that have come from the State of Madras into the new Mysore State and Coorg, there is no statutory Board. Therefore in the Bill in clause 3, it is said that this legislation would be brought into force in such areas and on such dates that the Government might notify from time to time. Since there is a statutory Board functioning already in the State of Bombay which is also functioning in

that part of the Bombay State which has come into the new Mysore State and also another one in that area which has come from that part of Hyderabad into the Mysore State under section 109, of the States Reorganisation Act, these corporate bodies still continue to function in those areas until other arrangements are made by the Government of India. This Act will not be brought into force immediately in all the areas of the New Mysore State. Therefore clause 3 has been so worded as to make it possible for the Government to bring into force the provisions of this Act by stages in the different parts of the new Mysore State. That is the reason why clause 3 is somewhat different from the original Bill which was passed by the old Mysore Assembly.

Sir, I need not go into all the details of this Bill. The purposes of this Bill have been explained in the statement of Objects and Reasons. To develop the Khadi and other Village Industries, it has been felt that a Board of this nature will have to be constituted and arrangements made for the effective functioning of such a Board.

With these few observations, I commend my motion for the acceptance of the House.

Mr. SPEAKER.—Motion moved:

"That the Mysore Khadi and Village Industries Bill, 1956 be taken into consideration."

Sri J. MOHAMED IMAM (Jagalur).—Sir, it is my unpleasant duty to oppose this Bill. We opposed this when it was introduced and passed during the last session of the old Mysore Assembly. The fact that it has come up again before this Assembly is a clear indication of the righteousess of the stand we have taken.

Sir, when I oppose this Bill, I should not be mistaken that I am not a lover of Khadi. Sir, the Hon'ble Leader of the House will remember perhaps—it is within his knowledge—that I had promoted some Khadi Centres specially in Imangala in Chitaldrug District and as the President of the District Board, I started a number of Centres. When I was in Government, we were giving a lot of grants for the improvement of Khadi. Even before the Congress came into office, the then Government had started Khadi centres at Badanval and various other places and they were giving handsome grants. It was our sincere intention to promote Khadi. But our experience has been that this Khadi movement is as old as nearly 30 or 40 years and it has not caught the imagination or fascination of the people. Sir, there is much propaganda to wear khadi. Let me ask in all fairness and frankness, in this population of 2,00,00,000 what is the percentage of people that put on Khadi? Except Members of the Legislature, leaders among the Congress Party and others which may come to not even one per cent, I can say without fear of contradiction, at least 99 per cent of the people have not taken to Khadi. You take statistics in any town or in any area. What is the percentage of Khadi-wearing people? In my own place at Jagalur which the Minister has not yet visited, I think out of a population of about 6,000, only a doezn people put on Khadi. They put on Khadi when Ministers visit and not at other times.

Sri C. M. POONACHA.—That is my justification for the constitution of such a Board in order to intensify the Khadi movement.

Sri J. MOHAMED IMAM.—What I want to sumit is, this will not be enough to intensify. In spite of the strenuous efforts, it has not spread among the masses while on the other hand, we have been spending money. It is true that the Government of India has been spending crores and crores of rupees over this Khadi development. I only feel that all this amount could have been utilised towards more profitable activities. Sir, I said on a previous occasion that now the time had come for us to change our policy and to change our view. Instead of confining ourselves to Khadi, instead of saying that people should wear Khadi, we must switch on to Swadeshi movement. Swadeshi goods means Indian made goods. The slogan must be everywhere and it must be the Government policy that instead of confining this

(SRI J. MOHAMED IMAM.)

purely as a Khadi movement which perhaps was very useful during those days when we were demanding independence from a foreign power, now when we think of building our State industrially, I think we must change our outlook. We must say 'Buy swadeshi.' Supposing I say: instead of khadi, if the Government says 'Use swadeshi cloth,' 'Use any cloth made in India,' I am sure, it will catch the imagination of the people better and you will all be interested in encouraging this move. That is the only way of providing more incentive to khadi and swadeshi industries. Sir, Mahatma Gandhi started this movement with some idea. In those days, when most of the cloth was being imported from foreign countries, to teach a lesson to the Britishers he said that we would use only Khadi and see that foreign cloth did not pour into our country. Those days are gone. I would ask whether the Government are not interested in the development of the swadeshi goods. Our view must be to use only swadeshi goods—not only cloth but every article that is manufactured in our country. Sir, I have seen abroad people using things manufactured only in their country. In France I saw that every person used articles manufactured only in France and they never used things imported from outside. In England we find all cars used by the people there are cars manufactured in England. All things that we could get in our country itself must be used by us and we should not go in for foreign goods. That movement has not been attempted by this Government or by the Central Government. This Khadi movement is out of date. That is one of the reasons why I say that we should not spend money on this. Let us leave this to the private institutions. Sir, I must state with great regret that this movement will become a partisan affair. The constitution of the Board, appointment of the Chairman is all nothing but of a partisan nature. Crores and crores of rupees will be spent by the Centre and the State will spend in lakhs. To whom does that money go? This Bill seeks to appoint a Chairman and an elaborate Board. One of the qualifications laid down is, a person who does not wear khadi should not be a member of the Board. Is this not discriminatory? I know the gentleman who is responsible for this; It is my friend Sri K. Pattabhiraman. I know he is a great lover of khadi. He not only loves khadi but wears khadi. I have great respect for his sincerety and patriotism but I would try my best to convert him from khadi mevement to swadeshi movement. I know that once the Government of India and the Government of Mysore issued orders to all Panchayets; Amildars compelled people to purchase khadi. Here 80,000 rupees are set apart for the pay and other things of the Board and the Chairman. This is nothing but an attempt to provide employment, to give some remuneration to people who are very much in the movement and who are in Congress Party. You know Sir, that the non-Congress members in this House are not confined to khadi but they do not dislike it. On principle we do not want to get into it. We are certain that the khadi movement would be a failure. We are also aware that the amount spent on this would be a waste. This disqualification clause clearly indicates that this is a party affair. The membership of the Board is confined to only those who wear khadi and the people who put on khadi always come from the ruling party.

Sri K. PATTABHIRAMAN (Kolar).—I do not agree.

Sri J. MOHAMED IMAM.—The Hon'ble Member may be an exception. Sir, I need not go further into these matters. This discriminatory clause is highly objectionable. We do not find such a clause in the Central Government Act. The Minister who has moved this must be able to appraise us whether there is such a clause in the Bombay Act or the Madras Act. I do not know whether he has a similar Act in Coorg.

Mr. SPEAKER.—It is in the Bombay Act.

Sri J. MOHAMED IMAM.—If it is there, it is highly objectionable.

Mr. SPEAKER.—I only gave it as a matter of information.

Sri J. MOHAMED IMAM.—Thank you Sir. This discrimination and compelling people to wear khadi is against the provision of the Constitution. On these grounds I oppose this Bill.

ಶ್ರೀ ವಿ. ಟಿ. ಮಾಗಡಿ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ನಮ್ಮ ವಿರೋಧ ಪಕ್ಷದ ಮುಖಂಡರು ಮಾಡಿದಂತಹ ಭಾಷಣವನ್ನು ಕೇಳಿ ನಿಜವಾಗಿಯೂ ನನಗೆ ಬಹಳ ಖೇದವೂ ಮತ್ತು ದುಃಖವೂ ಎಲ್ಲವೂ ಉಂಟಾಯಿತು. ಅವರೂ ಹಳ್ಳಿಯ ಮತದಾರರಿಂದ ಆರಿಸಿ ಬಂದಿದ್ದಾರೆ. ಹಳ್ಳಿಗಳ ರುಪ್ಪದರಿಂದ ಅವರು ಖಾದಿ ಮತ್ತು ಗ್ರಾಮೋದ್ಯೋಗಗಳ ಕಾರ್ಯಕ್ರಮಗಳನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಂಡಂತೆ ಕಾಣಿಸುವುದಿಲ್ಲ. ಅವರ ಮುಖಂಡರೇ ಆದ ಶ್ರೀ ಆಚಾರ್ಯ ಕೃಪಲಾನಿಯವರು ಈ ಒಂದು ಮಾತನ್ನು ಎಂದರೆ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಮುಂದಕ್ಕೆ ತರಬೇಕೆಂದು ಹೇಳಿರುವುದು ಅದಕ್ಕೆ ಗೊತ್ತಿದೆಯೆಂದು ಕಾಣುತ್ತದೆ. ಹೀಗಿದ್ದೂ ಈ ಅಸೆಂಬ್ಲಿಯ ಸದಸ್ಯರಾಗಿ ವಿರೋಧ ಪಕ್ಷದಲ್ಲಿದ್ದೇನೆಂಬ ಒಂದು ರೀತಿಯ ಚಟದಿಂದ ಈ ರೀತಿ ವಿರೋಧ ಮಾಡುತ್ತಿದ್ದಾರೆಂತ ಕಾಣುತ್ತದೆ. ನಮ್ಮ ಅಪೋಸಿಷನ್‌ನಲ್ಲಿ ಮೂರು ನಾಲ್ಕು ಮಂದಿಯೇ ಖಾದಿ ಹಾಕುತ್ತಾರೆಂತಲೂ ಮತ್ತಾರೂ ಹಾಕುವುದು ಅವರ ಕಣ್ಣಿಗೆ ಕಾಣಿಸುತ್ತಿಲ್ಲವೆಂದೂ ಅವರು ಈ ರೀತಿ ಹೇಳುತ್ತಿದ್ದಾರೆಂದು ತೋರುತ್ತದೆ. ಇದು ನಮಗೆ ನಿಜವಾಗಿಯೂ ಒಂದು ಮುಖ್ಯವಾದ ವಿಷಯ. ಈ ಗ್ರಾಮೋದ್ಯೋಗ ಹಳ್ಳಿಗಳಲ್ಲಿ ಜನರಿಗೆ ಪರಿಹಾರವನ್ನು ದೊರಕಿಸಿಕೊಡುವ ಉದ್ಯೋಗ. ಕೆಲವರು ವಿರೋಧಪಕ್ಷದಲ್ಲಿದ್ದೇವೆಂದು ಕಾಂಗ್ರೆಸ್ ಪಕ್ಷ ಇದನ್ನು ತಂದಿದೆಯಲ್ಲ ಅದರಿಂದ ವಿರೋಧಿಸಬೇಕೆಂದು ವಿರೋಧಿಸುತ್ತಾರೋ ಏನೋ ಎಂದೆನಿಸುತ್ತದೆ.

ಸ್ವಾಮಿ, ನಮ್ಮ ಹಿಂದೂಸ್ಥಾನದಲ್ಲಿ ಸಾವಿರಾರು ಜನ ಕೂಲಿಮಾಡಿಕೊಂಡು ಜೀವಿಸುತ್ತಿದ್ದಾರೆ. ಅಂತಹ ಜನಕ್ಕೆಲ್ಲ ಇದು ಒಂದು ತರಹ ಉದ್ಯೋಗವಾಗುತ್ತದೆ. ಮೂವತ್ತು ವರ್ಷಗಳ ಹಿಂದೆಯೇ ಮಹಾತ್ಮಾ ಗಾಂಧಿಯವರು ಇಂತಹ ಗ್ರಾಮ ಕೈಗಾರಿಕೆಗಳನ್ನು ಮುಂದಕ್ಕೆ ತರಬೇಕು ಎಂದು ಹೇಳಿದರು. ಅಂತಹುದರಲ್ಲಿ ನಮ್ಮ ಶ್ರೀ ಇಮಾಂ ಸಾಹೇಬರು ಈ ರೀತಿ ಹೇಳಿರುವುದು ಆಶ್ಚರ್ಯವಾಗಿದೆ. ಈ ಗ್ರಾಮೋದ್ಯೋಗಗಳನ್ನು ಮುಂದಕ್ಕೆ ತರದೆ ಹೋದರೆ ನಮ್ಮ ಸ್ವರಾಜ್ಯ ಉಳಿಯುಲಿಕ್ಕಿಲ್ಲ. ಏಕೆಂದರೆ ನಮ್ಮಲ್ಲಿ ಇನ್ನೂ ಅನೇಕ ಜನ ಹೊಟ್ಟೆಗೆ ಇಲ್ಲದೆ ತಿರುಗಾಡುವವರು ಸಾವಿರಾರು ಮಂದಿ ಸಿಕ್ಕುತ್ತಾರೆ. ನಾವು ಬೆಂಗಳೂರಿಗೆ ಬಂದ ಮೇಲೆ ಈ ಪಟ್ಟಣದಲ್ಲಿ ಏನಾಗಿದೆ ಎಂದು ನೋಡಿದರೆ ದೇವರೇ, ಯಾವ ರೀತಿ ಹೊಟ್ಟೆಗೆ ಹಾಕಬೇಕು ಎಂಬುದಾಗಿ ನಮಗೆಲ್ಲರಿಗೂ ಕಾಣಬಹುದು. ಅದಿಲ್ಲದೆ ಇವೊತ್ತಿನ ದಿವಸ ಫ್ಯಾಕ್ಟರಿಗಳನ್ನು ಮಿಲ್‌ಗಳನ್ನು ಹಾಕಿಕೊಂಡು ತಮ್ಮ ತಮ್ಮ ಹೊಟ್ಟೆಗಳನ್ನು ದೊಡ್ಡದುಮಾಡಿ ಕುಳಿತ ಜನರಿಗೆ, ಅವರಿಗೆ ಸಾಲದು, ಮತ್ತಷ್ಟು ಹಾಕಿರಿ ಎಂದು ಕೇಳುವುದು ಮತ್ತು ಬಡಜನರಿಗೆ ಹೊಟ್ಟೆಗೆ ಹಾಕಬೇಡಿ ಎಂಬವಾದ ಇದಕ್ಕೆ ಯಾರೂ ಬೆಂಬಲ ಕೊಡಲಾರರು. ನಾನು ನನ್ನ ಮಾನ್ಯ ಮಿತ್ರರಿಗೆ ಒಂದು ಮಾತನ್ನು ಕೇಳಬಯಸುತ್ತೇನೆ. ಯಾವಾಗಲಾದರೂ ಧಾರವಾಡ, ಬಿಜಾಪುರ, ಬೆಳಗಾಂ ಕಡೆ ದಯಮಾಡಿ ಬಂದಾಗ ನಾನು ಅವರಿಗೆ ತೋರಿಸುತ್ತೇನೆ, ಖಾದಿ ಮತ್ತು ಗ್ರಾಮೋದ್ಯೋಗಗಳು ಹೇಗೆ ನಡೆಯುತ್ತಿವೆ ಮತ್ತು ಎಷ್ಟು ಜನರ ಹೊಟ್ಟೆ ತುಂಬುತ್ತಿದೆ ಎಂಬುದನ್ನು. ಆಗ ಇವರುಗಳು ಈ ವಾದ ಸರಣಿಯನ್ನು ಬಿಡುತ್ತಾರೆಂದು ನನಗೆ ಖಾತ್ರಿಯಾಗಿದೆ.

ಇವೊತ್ತು 'All India Khadi and Village Industries Board' ಎನ್ನುವ ಸಂಸ್ಥೆಯನ್ನು ಹಿಂದೂಸ್ಥಾನ ಸರ್ಕಾರದವರು ಸ್ಥಾಪನೆ ಮಾಡಿ ಈಗ್ಗೆ ಸುಮಾರು ಎರಡು, ಎರಡೂವರೆ ವರ್ಷಗಳಾದುವು. ಅಂದಿನಿಂದ ಅವರು ಎಲ್ಲ ಪ್ರಾಂತಗಳ ಬೆನ್ನು ಹತ್ತಿ ಎಲ್ಲ ಪ್ರಾಂತಗಳಲ್ಲಿಯೂ ಕೂಡ ಒಂದು Statutory Board ಇರಬೇಕು ಎಂದು ಹೇಳಿದರು. ಇವೊತ್ತಿನ ದಿವಸ ನಮ್ಮ ಸರ್ಕಾರದವರು ಈ Statutory Board ಮಾಡುವಂಥ ಒಂದು ಮಸೂದೆಯನ್ನು ತಂದಿದ್ದಾರೆ. ನಾವು ಈ ದಿವಸ ಈ Statutory Board ಗೆ ಯಾವ ರೀತಿಯಿಂದ ಸಹಾಯ ಮಾಡಬೇಕಾಗಿದೆಯೋ ಅದನ್ನು ಬಿಟ್ಟು ವಿರೋಧ ಮಾಡುವ ಜನ ಇನ್ನೂ ನಮ್ಮಲ್ಲಿ ಸಿಕ್ಕುತ್ತಾರಲ್ಲ ಎಂದು ನನಗೆ ಮಾತ್ರ ಬಹಳ ದುಃಖವುಂಟಾಗುತ್ತದೆ.

ಇವೊತ್ತು ಹಿಂದೂಸ್ಥಾನದಲ್ಲಿ ಒಕ್ಕಲುತನವೇ ಒಂದು ದೊಡ್ಡ ಉದ್ಯೋಗವಾಗಿದ್ದರೂ ಕೂಡ ಒಕ್ಕಲುತನವನ್ನು ಮಾಡುತ್ತಿರುವ ಜನರಿಗೆ ಹೊಟ್ಟೆ ತುಂಬುವಷ್ಟು ಉತ್ಪನ್ನ ಅದರಿಂದ ಬರುವುದಿಲ್ಲ. ಅದರ ಜೊತೆಗೆ ಒಕ್ಕಲುತನದಲ್ಲಿ ಕೆಲಸಮಾಡುವಂಥ ಕೂಲಿಕಾರ ಜನರಿಗೆ ಬಹಳ ತೊಂದರೆಗಳಿವೆ. ಈ ಕೂಲಿಕಾರ ಜನರು ಅವರು ತಮ್ಮ ಒಕ್ಕಲುತನದಲ್ಲಿ ಕೆಲಸಮಾಡಿ ಉಳಿದಂಥ ಸುಮಾರು ಆರು ತಿಂಗಳ ಅವಧಿಯನ್ನು ವಿನಾಕಾರಣ ಕಳೆಯುತ್ತಾ ತಿನ್ನುವುದು ನಮಗೆಲ್ಲ ಗೊತ್ತಿರುವ ಸಂಗತಿ. ಆರು ತಿಂಗಳ ಕಾಲ ಕೆಲಸವಿಲ್ಲದೆ ಇರುವಾಗ ಅವರು ಯಾವ ಕೆಲಸ ಮಾಡಬಹುದು, ಅವರಿಗೆ ಯಾವ ರೀತಿಯ ಕೆಲಸವನ್ನು ಕೊಟ್ಟು ಅವರು ಎಷ್ಟು ಉತ್ಪನ್ನ ಮಾಡುವಂತೆ ಮಾಡಬಹುದು, ಬಡತನದ ಸ್ಥಿತಿಯಿಂದ ಅವರು ಒಳ್ಳೆಯ ಸ್ಥಿತಿಗೆ ಬರಬಹುದು ಎಂಬ ದೃಷ್ಟಿಯಿಂದ ನಾವು ಪ್ರಯತ್ನ ಮಾಡಬೇಕು. ಅದನ್ನು ಬಿಟ್ಟು ನಾವು ಇದನ್ನು ವಿರೋಧ ಮಾಡುವುದು ಸರಿಯಲ್ಲ. ಬಡಜನರಿಗೆ ಒಂದು ತುತ್ತು ಅನ್ನ ಸಿಕ್ಕದೆ ಇರುವ ಸ್ಥಿತಿಯಲ್ಲಿ ಅದು ಸಿಕ್ಕುವ ಹಾಗೆ ಮಾಡಬೇಕೆಂಬ ದೃಷ್ಟಿಯಿಂದ ನಾವು ಅಡಿ ಇಡಲು ಪ್ರಯತ್ನ ಮಾಡಬೇಕು. ನಮ್ಮ ಹಿಂದಿನ ಮೈಸೂರು ದೇಶದಲ್ಲಿ (with due respect for the old State) ಮುಂಬೈ ಪ್ರಾಂತ್ಯ, ಮದರಾಸು ಪ್ರಾಂತ್ಯ ಮತ್ತು ಬೇರೆ ಪ್ರಾಂತ್ಯಗಳಲ್ಲಿ ಈ ಖಾದಿ ಮತ್ತು ಗ್ರಾಮೋದ್ಯೋಗಗಳು ಎಷ್ಟು ಬೆಳೆದಿದ್ದುವೋ ಅಷ್ಟು ಇಲ್ಲಿ ಬೆಳೆದಿರಲಿಲ್ಲ. ಅದಕ್ಕೆ ಕಾರಣವೆಂದರೆ ಹಿಂದೆ ಇದ್ದವರು ಇದರ ಬಗ್ಗೆ ಅಷ್ಟು ಉತ್ಸಾಹ ತಳೆದಿರಲಿಲ್ಲವೆಂದು ತೋರುತ್ತದೆ. ಹಿಂದೆ ಮಾಡಲಿಲ್ಲವೆಂದು ಮುಂದೆಯೂ ಮಾಡಬಾರದೆಂದಲ್ಲ. ಇನ್ನು ಮುಂದಾದರೂ ಇದನ್ನು ಬೇಕೆಂದು ಇವೊತ್ತು ಕೈ ಹಾಕಲಾಗಿದೆ. ಇವೊತ್ತು ಮುಂಬೈ ಪ್ರಾಂತದಲ್ಲಿ ಮತ್ತು ಹಿಂದಿನ ಮೈಸೂರು ಪ್ರಾಂತದಲ್ಲಿ ಮಾಡಿದಂಥ ಎರಡು ಪ್ರಾಂತಗಳ ಕೆಲಸಗಳನ್ನೂ ತುಲನಮಾಡಿ ನೋಡಿದರೆ ಅಜಗಜಾಂತರ ವ್ಯತ್ಯಾಸ ಕಾಣುತ್ತದೆ. ಮುಖ್ಯವಾಗಿ ಈ ವಿಚಾರದಲ್ಲಿ ನಾವೆಲ್ಲ ಅವರಿಗೆ ಒಮ್ಮನಸ್ಸಿನಿಂದ ಸಹಾಯಮಾಡಬೇಕು. ಹಳ್ಳಿಯೊಳಗೆ ನಾನಾ ತರಹ ಉದ್ಯೋಗಗಳನ್ನು ಮಾಡುವುದಕ್ಕೆ ನಮ್ಮ ಸಹಕಾರ ನೀಡಬೇಕು. ನಾಲ್ಕಾರು ಉದಾಹರಣೆಗಳನ್ನು ಕೊಡಬಹುದು. ನಮ್ಮ ದೇಶ

(ಶ್ರೀ ವಿ. ಟಿ. ಮಾಗಡಿ)

ದಲ್ಲಿ ಅನೇಕ ರೀತಿಯ ಕಚ್ಚಾಮಾಲು ಇದೆ. ಆದರೆ ನಮ್ಮ ದುರ್ದೈವದಿಂದ ಎಷ್ಟೋ ಮಾಲನ್ನು ಹೊಂಗೆ ಕಳುಹಿಸುತ್ತಿದ್ದೇವೆ. ಎಷ್ಟೋ ಮಾಲು ಉಪಯೋಗ ಮಾಡದೆ ಹೊಳೆಗುಂಟ, ನೀರಗುಂಟ ಸಮುದ್ರಕ್ಕೆ ಸೇರುತ್ತಿದೆ. ಅನೇಕ ಕಚ್ಚಾಮಾಲುಗಳು ನಮ್ಮ ದೇಶದಲ್ಲಿವೆ. ಬೇವಿನ ಬೀಜದಿಂದ ನಾವು ಈಗ ಮುಂಬೈ ಪ್ರಾಂತದಲ್ಲಿ ಮತ್ತು ಇತರ ಕಡೆಗಳಲ್ಲಿ ಸಾಬೂನು ತಯಾರಿಸುತ್ತಿದ್ದೇವೆ. ಬೇವಿನ ಬೀಜವನ್ನು ಸಂಗ್ರಹಿಸುವುದಕ್ಕೆ ಹಿಂದೆ ನಾವು ಯೋಚನೆ ಮಾಡುತ್ತಿರಲಿಲ್ಲ. ಅಲ್ಪಸ್ವಲ್ಪವಾಗಿ ಔಷಧಿಗಳಿಗೆ ಮಾತ್ರ ಉಪಯೋಗಿಸುತ್ತಿದ್ದರು. ಇವೊತ್ತಿನ ದಿವಸ ಹಿಂದೂಸ್ಥಾನ ಸರ್ಕಾರದವರು, All India Khadi and Village Industries Board ಅವರು ಕೈ ಹಾಕಿದ್ದರಿಂದ ನೀರು ಪಾಲಾಗುತ್ತಿದ್ದ ಬೇವಿನ ಬೀಜದಿಂದ ಸಾಬೂನು ತಯಾರುಮಾಡುವ ಗ್ರಾಮಕೈಗಾರಿಕೆಯನ್ನು ಪ್ರಾರಂಭಿಸಿದ್ದಾರೆ. ಇದನ್ನು ನೋಡಿದರೆ ನಮಗೆಲ್ಲ ಒಂದು ತರಹ ಆಶ್ಚರ್ಯವುಂಟಾಗುತ್ತದೆ. ಯಾವ ಮಾಲು ಇವೊತ್ತಿನ ದಿವಸ ಹೊಳೆಗುಂಟ ಹರಿದು ಸಮುದ್ರವನ್ನು ಕೂಡುತ್ತದೆಯೋ ಅಂಥ ಮಾಲನ್ನ ನಾವು ತಂದು ನಾಲ್ಕೆಂಟುನೂರು ಜನರಿಗೆ, ಅನ್ನವಿಲ್ಲದ ಜನರಿಗೆ ಹೊಟ್ಟೆ ತುಂಬಲು ಒಂದು ಉದ್ಯೋಗವನ್ನು ಕಲ್ಪಿಸಲು ಸಾಬೂನು ತಯಾರಿಸುತ್ತಿದ್ದೇವೆ. ಈ ಸಾಬೂನು ಹಳ್ಳಿಯವರಿಗೆ ಕಾರ್ಖಾನೆಗಳಲ್ಲಿ ತಯಾರಾಗುವುದಕ್ಕಿಂತ ಕಡಮೆ ದರದಲ್ಲಿ ಕೊಡಲು ಸಾಧ್ಯವಾಗಿದೆ. ನಿಜವಾಗಿ ಮಾನ್ಯ ಇಮಾಂಸಾಹೇಬರವರು ನಮಗೆ ಅಭಿನಂದನೆಯನ್ನು ಸಲ್ಲಿಸಬೇಕು. ಅದನ್ನು ಬಿಟ್ಟು ನಮ್ಮನ್ನು ಯಾವಾಗಲೂ ಟೀಕೆಮಾಡುವಂತೆ ಮಾಡುವುದಕ್ಕೆ ಹೊರಟಿದ್ದಾರೆ. ನಾವು ಕೂಡ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಷುರುಮಾಡಬೇಕು. ಮೈಸೂರು ಸಂಸ್ಥಾನದಲ್ಲಿಯೂ ಯಾವ ಯಾವ ಕಚ್ಚಾಮಾಲು ಎಲ್ಲೆಲ್ಲಿ ಸಿಕ್ಕುತ್ತದೆಯೋ ಅಲ್ಲೆಲ್ಲ ಇಂಥ ಪದಾರ್ಥಗಳನ್ನು ಮಾಡಲಿಕ್ಕೆ ನಮ್ಮ ಸರ್ಕಾರದವರು ಕೂಡ ಒಂದು ಯೋಜನೆಯನ್ನು ತಯಾರುಮಾಡಿದ್ದಾರೆ. ಅದೇ ಪ್ರಕಾರ ನಮ್ಮ ಸುದೈವದಿಂದ ಇದುವರೆಗೂ ಇದ್ದಂಥ ಒಂದು ರಾಟೆಗೆ ಬದಲಾಗಿ ಅಂಬರ್ ಚರಖಾ ರಾಟೆಯು ಇವೊತ್ತಿನ ದಿವಸ ಬಂದಿದೆ. ಇದು ನಮಗೆಲ್ಲರಿಗೂ ಶುಭಕಾಲವೆಂದು ಹೇಳಬಹುದು. ಅಂಬರ್ ಚರಖದಿಂದ ನೂಲುವ ಹೆಣ್ಣೇ ಆಗಲೀ, ಗಂಡೇ ಆಗಲೀ ದಿನ ಒಂದಕ್ಕೆ ಹನ್ನೆರಡಾಣೆಗೆ ಕಡಮೆಯಾಗದಷ್ಟು ಆದಾಯವನ್ನು ಪಡೆಯಬಹುದು. ಇಂಥ ಒಂದು ಉದ್ಯೋಗ ಬಂದಿದೆ. ಇದರಲ್ಲಿ ನೂಲುವುದನ್ನು ಕಲಿತುಕೊಂಡು ದಿನವಹಿ ಹನ್ನೆರಡಾಣೆ ಗಳಿಸಿಕೊಳ್ಳಬೇಕು ಎಂದು ಒಂದೇ ಸಮನೆ ಕ್ಯೂ ಹತ್ತಿ ಜನ ನಿಂತಿದ್ದಾರೆ. ಇವರೆಲ್ಲರಿಗೂ ರಾಟೆಯನ್ನು ಕೊಡುವುದಕ್ಕಾಗುವುದಿಲ್ಲ. ಇಂಥಾ ರಾಟೆಗಳಿಂದ ನೂಲು ತೆಗೆಯುವುದು ದೊಡ್ಡ ಗ್ರಾಮಉದ್ಯೋಗವಾಗಿದೆ. ಈ ಅಂಬರ್ ಚರಖಾರಾಟೆ ಕಾಮಧೇನು ಎಂದು ನಾವು ಹೇಳಬಹುದು, ಇದರ ಪ್ರಯೋಗ ನಮ್ಮ ಹಿಂದೂಸ್ಥಾನದ ಎಲ್ಲಾ ಪ್ರಾಂತಗಳಲ್ಲೂ ಕೂಡ ನಡೆದಿದೆ. ಹಿಂದೂಸ್ಥಾನ ಸರಕಾರದ ಅನೇಕ ದೊಡ್ಡ ಮುಖಂಡರು ಈ ಅಂಬರ್ ಚರಖಾವನ್ನು ಪರೀಕ್ಷೆಮಾಡಿ ಒಂದು ವರ್ಷದತನಕ ಇದನ್ನು ಜಾರಿಗೆ ತರದೆ, ಒಂದು ವರ್ಷದ ಅನಂತರ ಈ ಚರಖಾವನ್ನು ಜಾರಿಗೆ ತಂದರು. ಇದನ್ನು ಎಲ್ಲರೂ ಪರೀಕ್ಷೆ ಮಾಡಿದ್ದಾರೆ. ಇವೊತ್ತಿನ ದಿವಸ ಪ್ರತಿಯೊಂದು ಜಿಲ್ಲೆಯಲ್ಲಿಯೂ ನೂರಾರು ಸಾವಿರಾರು ಜನರಿಗೆ ಇದರಲ್ಲಿ ಶಿಕ್ಷಣವನ್ನು ಕೊಡಲು ಹೊರಟಿದ್ದಾರೆ. ಇವರೆಲ್ಲರಿಗೂ 3-4 ತಿಂಗಳ ಶಿಕ್ಷಣ ಕೊಟ್ಟಮೇಲೆ ಪ್ರತಿಯೊಬ್ಬ ಹೆಣ್ಣಾಳಿಗೂ ಗಂಡಾಳಿಗೂ ದಿನ ಒಂದಕ್ಕೆ ಹನ್ನೆರಡಾಣೆ ಆದಾಯ ಬರುತ್ತದೆ. ಇವೊತ್ತು ಮೈಸೂರು ಸಂಸ್ಥಾನಕ್ಕಿಂತ ಕೋಗಡೆ ಖಾದಿ ಹೆಚ್ಚಿಗೆ ಉತ್ಪತ್ತಿಯಾಗುತ್ತಿದೆ. ಇಲ್ಲಿಯೂ ಕೂಡ ಖಾದಿ ಉತ್ಪತ್ತಿಯಾಗತ್ತಿತ್ತು. ಅದನ್ನು ಹೆಚ್ಚು ಮಾಡಬೇಕೆಂದು ನಾವು ವಿಚಾರ ಮಾಡುತ್ತಿದ್ದೇವು. ಇವೊತ್ತು ನಾವು ಅಂಬರ್ ಚರಖಾದಿಂದ ಹೆಚ್ಚಿಗೆ ನೂಲನ್ನು ಉತ್ಪತ್ತಿ ಮಾಡುವುದಾದರೆ, ಒಂದು ಇಂಚು ಕೂಡ ಗಿರಣಿಬಟ್ಟೆಯನ್ನು ಕೊಳ್ಳುವ ಅವಶ್ಯಕತೆ ಬೀಳುವುದಿಲ್ಲ. ಏಕೆಂದರೆ ನಮ್ಮ ಅಂಬರ್ ಚರಖಾದಲ್ಲಿ 10 ರಿಂದ ಹಿಡಿದು 50 ನಂಬರ್‌ವರೆಗೆ ನೂಲನ್ನು ತೆಗೆಯುವಂತೆ ಮಾಡಬಹುದು. ಸರ್ವೇಸಾಧಾರಣವಾಗಿ ನೂರಕ್ಕೆ 95 ರಷ್ಟು ಹಳ್ಳಿಯಜನ ಸುಮಾರು 50 ನಂಬರಿನ ನೂಲಿಗಿಂತ ಹೆಚ್ಚಿಗೆ ತೆಳುವಾದ ಅರಿವೆಯನ್ನು ಉಪಯೋಗಮಾಡುತ್ತಿಲ್ಲ. ಎಂದ ಮೇಲೆ ಅಂಬರ್ ಚರಖಾದಿಂದ ಎಲ್ಲ ಅರಿವೆಗಳಿಗೂ ಬೇಕಾದ ನೂಲನ್ನು ತೆಗೆಯಬಹುದು.

4-30 P.M.

ಇವತ್ತಿನ ದಿವಸ ಮಾನ್ಯ ಇಮಾಂ ಅವರು ಹೇಳಿದ ಹಾಗೆ ಆಗುವುದಕ್ಕೆ ಸಾಧ್ಯವಿಲ್ಲದೇ ಇದ್ದರೂ ಕೂಡ, ಇದು ಅರ್ಧಮರ್ಧ ಪರದೇಶೀ ಎಂದು ಹೇಳಬಹುದು, ಇದು ಶ್ರೀಮಂತರ ಸ್ವದೇಶೀ ಆಗಿದೆ. ಬಡವರ ಸ್ವದೇಶಿಗೆ ಹೆಚ್ಚು ಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ನಮ್ಮ ಅನೇಕ ಸರ್ಕಾರಗಳು ಮತ್ತು ಅನೇಕ ರಾಷ್ಟ್ರೀಯ ಸಂಸ್ಥೆಗಳು ಈ ಖಾದಿಗೆ ಕೊಟ್ಟಂಥಾ ಒಂದು ಧೋರಣೆಯಿಂದ ನಾವು ಖಾದಿ ಕೆಲಸದಲ್ಲಿ ತೊಡಗಿದ್ದೇವೆ. ಈ ಖಾದಿ ಕೆಲಸದಲ್ಲಿ ತೊಡಗಿರುವ ಜನರಿಗೆ ಖಾದಿ ಉತ್ಪನ್ನ ಮಾಡಿಕೊಡುವುದಕ್ಕೆ ಎಷ್ಟೋ ತೊಂದರೆಗಳು ಅಡ್ಡಬಂದು ನಿಂತಿವೆ. ಈ ಉದ್ಯೋಗಿಗಳು ಮೂರು ಜನ ಹೇಳಿದಹಾಗೆ ಕೇವಲ ಒಂದು ತಾಸಿನಲ್ಲಿ ಅವರ ಮನಸ್ಸನ್ನು ಬದಲು ಮಾಡಬಹುದು. ಅವರೂಕೂಡ ನಮ್ಮಕಡೆ ಬಂದು ಒಂದು ಸಲ ನೋಡಬೇಕೆಂದು ಇನ್ನೊಂದಾವರ್ತಿ ವಿನಂತಿ ಮಾಡಿಕೊಳ್ಳುತ್ತೇನೆ.

ಎಲ್ಲಾದರೂ ಈ ಸಬಕಾರದ ಫ್ಯಾಕ್ಟರಿ ಪ್ರಾರಂಭವಾದರೆ ನಮಗೆ ಹೊಟ್ಟೆ ಉರಿಯುತ್ತದೆ. ಏಕೆಂದರೆ ಸಬಕಾರವನ್ನು ನಾವು ಒಂದು ಸಣ್ಣ ಮನೆಯಲ್ಲಿ ತಯಾರುಮಾಡಬಹುದು. ಅದಕ್ಕೆ ಬೇಕಾದ ಎಲ್ಲಾ ಸಾಮಾನುಗಳೂ ನಮ್ಮ ಹಳ್ಳಿಯಲ್ಲಿ ಸಿಕ್ಕುತ್ತವೆ. ಅದನ್ನು ಬಿಟ್ಟು ಹಳ್ಳಿಯಲ್ಲಿ ಸಿಕ್ಕುವಂತಹ ಕಚ್ಚಾಮಾಲನ್ನು ಉಪಯೋಗ ಮಾಡದೇ ಕೆಲವು ಸಾಮಾನುಗಳನ್ನು ಪರದೇಶಗಳಿಗೆ ಕಳುಹಿಸಿ ಬೇರೆಯವರಿಗೆ ಲಾಭ ಸಿಕ್ಕುವಂತೆ ಮಾಡಿಕೊಡುತ್ತಾ ಇದ್ದೇವೆ. ಆ ದೃಷ್ಟಿಯನ್ನು ಬಿಟ್ಟು ಬಿಟ್ಟರೆ ಒಳ್ಳೆಯದು. ಶ್ರೀಮಂತರ ಗಿರಣಿಗಳಲ್ಲಿ ತಯಾರಾದ ಸಬಕಾರವನ್ನು ಉಪಯೋಗ ಮಾಡಿ ನಮ್ಮ ಹಳ್ಳಿಯವರನ್ನು ಗುಂಡಿಗೆ ಹಾಕಲಿಕ್ಕೆ ಸಹಾಯಮಾಡಲು ಹೊರಟಿದ್ದೇವೆ. ಇದರಿಂದ ಹೊಟ್ಟೆ ಉರಿಯುತ್ತದೆ. ಇನ್ನು ಮುಂದಾದರೂ ಈ ಮಾತಿಗೆ ಲಕ್ಷ್ಯಕೊಡಬೇಕು. ಎಷ್ಟೋ ಜನ ಗಾಣಿಗರಿಗೆ ಉದ್ಯೋಗ ಇಲ್ಲ. ಅವರು ಗಿರಣಿಗಳನ್ನು ಬಂದು ಮಾಡಿಕೊಂಡು ಪೇಟೆ ಸೇರಲಿಕ್ಕೆ ಹೊರಟಿದ್ದಾರೆ. ಇದು ಹೋಗಬೇಕು. ಎಷ್ಟು ಜನ ಗಾಣಿಗರು ಇದ್ದಾರೆ ಅವರಿಗೆ ಸಾಕಾದಷ್ಟು ಕೆಲಸ ಕೊಡಲಿಕ್ಕೆ ಪ್ರಯತ್ನಮಾಡಿ. ಎಷ್ಟು ಜನ ನೇಕಾರರು ಇದ್ದಾರೆ ಅವರಿಗೆ ಸಾಕಾದಷ್ಟು ನೇಯ್ಗೆಕೆಲಸ ಕೊಡಲಿಕ್ಕೆ ಪ್ರಯತ್ನಮಾಡಿ. ಹಾಗೆ

ಮಾಡದೆ ಹೊಸ ಹೊಸ ಫ್ಯಾಕ್ಟರಿಗಳನ್ನು ಪ್ರಾರಂಭ ಮಾಡಿ, ಇದ್ದಂಥಾ ಸಣ್ಣ ಸಣ್ಣ ಉದ್ಯೋಗಗಳನ್ನು ನಾಶಮಾಡುವ ಹವ್ಯಾಸಕ್ಕೆ ಬೀಳಬೇಡಿ. ಇದ್ದಂಥ ಸಣ್ಣ ಸಣ್ಣ ಉದ್ಯಮಗಳನ್ನು ಪುನರುಜ್ಜೀವನಗೊಳಿಸಿ ಅನಂತರ ಹೊಸ ಉದ್ಯೋಗಗಳನ್ನು ಮಾಡಬೇಕೇ ವಿನಾ ಇದ್ದುದನ್ನು ಹಾಳುಮಾಡಿ ಹೊಸ ಪ್ರಯತ್ನಕ್ಕೆ ಕೈ ಹಾಕಿದರೆ ಅದನ್ನು ಮೂರ್ಖತನ ಎಂದು ಹೇಳಬೇಕಾಗುತ್ತದೆ. ಈ ವಿಷಯದಲ್ಲಿ ಮಾನ್ಯ ಸದಸ್ಯರು ಸ್ವಲ್ಪ ಲಕ್ಷ್ಯಕೊಡಬೇಕು. ಇವತ್ತು ಇನ್ನು ಒಂದು ಮಾತು ಇದೆ. ಮುಂಬೈನಲ್ಲಿ, ಮದರಾಸಿನಲ್ಲಿ, ಆಂಧ್ರದಲ್ಲಿ ನನಗೆ ಗೊತ್ತಿದ್ದಂತೆ ನಮ್ಮ ಆಲ್ ಇಂಡಿಯಾ ಹಾಂಡ್‌ಲೂಂ ಬೋರ್ಡ್‌ನಿಂದ ಅನೇಕ ಸಹಾಯವನ್ನು ತೆಗೆದುಕೊಂಡಿದ್ದಾರೆ. ಆದರೆ ನಮ್ಮ ಹಿಂದಿನ ಮೈಸೂರು ಸರ್ಕಾರದವರು ಆ ಪ್ರಮಾಣದಲ್ಲಿ ಸಹಾಯ ತೆಗೆದುಕೊಂಡಿರಲಿಲ್ಲ. ಅದು ಏಕೆಂದರೆ ಎಷ್ಟೋ ಜನ ನಮ್ಮಲ್ಲಿ ಬುದ್ಧಿವಂತರು ಪವರ್‌ಲೂಂ ಇರಬೇಕು, ಟೆಕ್ಸ್‌ಟೈಲ್ ಇರಬೇಕು, ಹಳ್ಳಿಯ ನೇಕಾರರು ಇರಬಾರದು ಎಂಬ ದೃಷ್ಟಿಯಿಂದ ಇದ್ದಾರೆ. ಈ ವಾದವನ್ನು ಮಾಡುವುದರಿಂದ ತಲೆ ಸಿಡಿಯಲಿಕ್ಕೆ ಹತ್ತುತ್ತದೆ. ಸುಮಾರು ಒಂದು ಕೋಟಿ ಜನ ನೇಕಾರರು ಇವತ್ತಿನ ದಿವಸ ಹ್ಯಾಂಡ್‌ಲೂಂನಿಂದ ಜೀವನ ಮಾಡುತ್ತಿದ್ದಾರೆ. ಅಂತೆಯೇ ಸರ್ಕಾರದವರು ಈ ಒಂದು ಉದ್ಯೋಗಕ್ಕೆ ಹೆಚ್ಚು ಲಕ್ಷ್ಯ ಕೊಟ್ಟು ಒಂದು ಹ್ಯಾಂಡ್‌ಲೂಂ ಬೋರ್ಡ್ ಸ್ಥಾಪನೆಮಾಡಿ ಅದರ ಮೂಲಕ ಹಣವನ್ನು ಹಂಚುತ್ತಾ ಇದ್ದಾರೆ. ಇನ್ನುಮುಂದೆ ಈ ಹ್ಯಾಂಡ್‌ಲೂಂ ಬೋರ್ಡಿನ ಉಪಯೋಗವನ್ನು ಪೂರ್ಣವಾಗಿ ಮಾಡಿಕೊಳ್ಳಬೇಕೆಂದು ಸರ್ಕಾರದವರಿಗೆ ವಿನಂತಿ ಮಾಡುತ್ತಿದ್ದೇನೆ. ಹ್ಯಾಂಡ್‌ಲೂಂ ಮತ್ತು ಪವರ್‌ಲೂಂ ಬಗ್ಗೆ ದೇಶದಲ್ಲಿ ಒಂದು ಸಣ್ಣ ವಾದ ನಡೆದಿದೆ. ಪವರ್‌ಲೂಂ ಬಗ್ಗೆ ನನ್ನದು ಏನೂ ವಿರೋಧ ಇಲ್ಲ. ಆದರೆ ಒಂದು ಪವರ್‌ಲೂಂ ಇರುವುದರಿಂದ 3-4 ಹಾಂಡ್‌ಲೂಂಗಳು ಬಂದಾಗುತ್ತವೆ ಎಂಬುದನ್ನು ಲಕ್ಷ್ಯದಲ್ಲಿಡಬೇಕು. ಎಲ್ಲಿ ಹ್ಯಾಂಡ್‌ಲೂಂಗೆ ಸಾಕಾದಷ್ಟು ಕೆಲಸ ಇರುತ್ತದೆಯೋ ಅಲ್ಲಿ ಹೆಚ್ಚಾಗಿ ಹಾಂಡ್‌ಲೂಂ ಮಾಡುವುದಾದರೆ ಮಾಡಿಕೊಳ್ಳಲಿ, ತಕರಾರಿಲ್ಲ. ನಮ್ಮ ರಾಜ್ಯದ ಹ್ಯಾಂಡ್‌ಲೂಂಗಳನ್ನು ಬಂದ್‌ಮಾಡಿ ಸಾವಿರಾರು ಪವರ್‌ಲೂಂಗಳನ್ನು ಪ್ರಾರಂಭಮಾಡುವುದಾದರೆ, ಈ ತರಹದ ನೀತಿಯನ್ನು ಸರ್ಕಾರ ಅನುಸರಿಸುವುದಾದರೆ ನನ್ನ ಸಂಪೂರ್ಣ ವಿರೋಧ ಇದ್ದೇ ಇದೆ. ಸರ್ಕಾರದವರು ನಿಜವಾಗಿಯೂ ನಮ್ಮಲ್ಲಿ ಯಾರೊಬ್ಬರು ನೇಕಾರರೂ ಕೂಡ ಹೊಟ್ಟೆಗಿಲ್ಲದೆ ಬೇರೆಕಡೆ ಅಲೆಯಬಾರದು ಎಂಬ ದೃಷ್ಟಿಯನ್ನಿಟ್ಟುಕೊಂಡು ಕೆಲಸಮಾಡಬೇಕೇ ವಿನಾ ಅವರನ್ನು ಹೊಟ್ಟೆಗಿಲ್ಲದಂತೆ ಮಾಡಿ ಪರಿತಾಪಕ್ಕೆ ಗುರಿಮಾಡಬಾರದು. ಒಳ್ಳೆಯ ನೂಲಿನಿಂದ ಬಟ್ಟೆ ಮಾಡುವವರು ಒಬ್ಬರು, ಪವರ್‌ಲೂಂನಲ್ಲಿದ್ದಂಥಾ ನೇಕಾರರಿಗೆ ಹೆಚ್ಚುಕೂಲಿ ಸಿಕ್ಕಬಹುದು ಎಂಬ ಹುಮ್ಮಸ್ಸಿನಿಂದ ನಾವು ಜನರ ತಲೆಯಮೇಲೆ ಕಲ್ಲು ಹಾಕಬಾರದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ದೇಶದಲ್ಲಿ ಅನೇಕ ಉದ್ಯೋಗಗಳು ಬೆಳೆಯುತ್ತಾ ಇವೆ. ಎಲ್ಲ ಉದ್ಯೋಗಗಳನ್ನು ನಮ್ಮ ರಾಜ್ಯದಲ್ಲಿ ಶುರುಮಾಡಲಿಕ್ಕೆ ಶಕ್ಯ ಇದೆ. ಎಲ್ಲಾ ರಾಜ್ಯಗಳಿಗಿಂತ ಹೆಚ್ಚಾಗಿ ನಮ್ಮ ರಾಜ್ಯದಲ್ಲಿ ಸಾಕಾದಷ್ಟು ಕಚ್ಚಾಮಾಲು ಸಿಕ್ಕುತ್ತಾ ಇದೆ. ಬೇಕಾದಷ್ಟು ಕಟ್ಟಿಗೆ, ಬೇಕಾದಷ್ಟು ಬೊಂಬು, ಬೇಕಾದಷ್ಟು ಹತ್ತಿ ಹೀಗೆ ನಾನಾ ತರಹದ ಕಚ್ಚಾಮಾಲು ಸಿಕ್ಕುತ್ತಾ ಇದೆ. ಆದರೆ ನಾವು ಈ ಎಲ್ಲ ಮಾಲನ್ನು ಉಪಯೋಗ ಮಾಡುತ್ತಾ ಇಲ್ಲ. ಇದು ಒಂದು ಸೋಜಿಗದ ಮಾತು, ಆಶ್ಚರ್ಯ ಎನಿಸಿದೆ. ನಾವು ಹತ್ತಿಯನ್ನು ದಾವಣಗೆರೆಯಲ್ಲಿ, ಚಿತ್ರದುರ್ಗದಲ್ಲಿ ಬೆಳೆಯುತ್ತೇವೆ. ಅದನ್ನು ಮುಂಬೈನಲ್ಲಿ ತೆಗೆದುಕೊಂಡು ಹೋಗಿ ಮಾರಾಟ ಮಾಡಿ, ನಮಗೆ ಬೇಕಾದ ಬಟ್ಟೆ ತರಿಸಿಕೊಳ್ಳುತ್ತೇವೆ. ಅದರಂತೆಯೇ ಜೋಳ, ಗೋಧಿ, ಅಕ್ಕಿ ಇವುಗಳನ್ನು ಬೆಳೆಯುತ್ತಾ ಇದ್ದೇವೆ. ಇದನ್ನೂ ಸಹಾ ಅಹಮದಾಬಾದಿಗೆ... ಕಾಕ್ಕೋ, ಕಲ್ಕತ್ತಾಕ್ಕೋ ಕಳುಹಿಸಿ ರೊಟ್ಟಿ, ಅನ್ನ ಮಾಡಿಸಿ ತರಿಸಿಕೊಂಡು ಮಾರಲಿಕ್ಕೆ ಇಟ್ಟರೆ ಎಷ್ಟು ಚೆನ್ನಾಗಿ ಕಾಣಿಸುತ್ತದೋ ಇದೂ ಕೂಡ ಅಷ್ಟೇ ಚೆನ್ನಾಗಿ ಕಾಣಿಸುತ್ತದೆ. ಇದರ ಕಡೆಗೆ ಲಕ್ಷ್ಯ ಇಲ್ಲ. ಇಂಥ ಒಂದು ಹುಚ್ಚರ ಕೆಲಸ ಮಾಡುವುದಕ್ಕೆ ಹೊರಟಿದ್ದೇವೆ. ನಮ್ಮ ದೇಶದಲ್ಲಿ ಇದನ್ನು ಬಂದು ಮಾಡಬೇಕು. ಎಲ್ಲಿ ಕಚ್ಚಾಮಾಲು ಸಿಕ್ಕುತ್ತದೆಯೋ ಅಲ್ಲಿ ಆ ಊರಿನವರು ತಮ್ಮ ಊರಿನಿಂದ ಅದನ್ನು ಹೊರಗೆ ಕಳುಹಿಸುವುದಕ್ಕೆ ಅವಕಾಶ ಕೊಡಬಾರದು. ಹೊರಗಡೆಯಿಂದ ಬೇರೆ ಸಾಮಾನು ತಮ್ಮ ಊರಿಗೆ ಬರುವಂತೆ ಮಾಡಿಕೊಳ್ಳಬಾರದು, ಆ ರೀತಿ ಆಯಾ ಸ್ಥಳದವರು ತಮ ತಮಗೆ ಬೇಕಾದ ಪದಾರ್ಥಗಳನ್ನು ತಮ್ಮಲ್ಲಿರತಕ್ಕ ಸಾಮಾನುಗಳಿಂದ ತಯಾರುಮಾಡಿಕೊಳ್ಳಲು ಸಮರ್ಥರಾಗಬೇಕು ; ಆ ರೀತಿ ಆಗಲು ಏನು ಮಾಡಬೇಕು ಎಂಬ ದೃಷ್ಟಿಯಿಂದ ಸರ್ಕಾರದವರು ಯೋಜನೆಮಾಡಿ ಅದನ್ನು ಜಾರಿಗೆ ತರಬೇಕು. ಹಳ್ಳಿಗೆ ಬೇಕಾಗುವಂಥ ಸಾಮಾನನ್ನು ಒಂದು ಹಳ್ಳಿಯಲ್ಲಿ ಸಾಧ್ಯಇಲ್ಲದೆ ಇದ್ದರೆ ಜಿಲ್ಲೆಯಲ್ಲಿ ಮಾಡಲಿಕ್ಕೆ ಶಕ್ಯ ಇದೆ. ಆದ್ದರಿಂದ ಎಲ್ಲೆಲ್ಲಿ ಯಾವ ಯಾವ ಉದ್ಯೋಗಗಳನ್ನು ಮಾಡಲಿಕ್ಕೆ ಶಕ್ಯವಿದೆಯೋ ಅಲ್ಲಿ ಅವುಗಳನ್ನು ಮಾಡಲಿಕ್ಕೆ ಸರ್ಕಾರ ಮುಂದೆ ಬರಬೇಕು. ಇದು ಒಂದು ದೊಡ್ಡನೀತಿ, ಇದು ಒಂದು ದೊಡ್ಡ ಶ್ರೇಯಸ್ಸು ಎಂದು ಹೇಳಬಹುದು. ನಾವು ದೇಶದ ಪ್ರತಿನಿಧಿಗಳಾಗಿ ಆರಿಸಿ ಬಂದು ಜನರ ಕಲ್ಯಾಣ ಮಾಡುತ್ತೇವೆ ಎಂದು ಹೇಳಿಕೊಂಡು ದೊಡ್ಡ ದೊಡ್ಡ ಫ್ಯಾಕ್ಟರಿಗಳು ಮತ್ತು ದೊಡ್ಡ ದೊಡ್ಡ ಮಿಲ್ಲುಗಳಿಗೆ ಪ್ರೋತ್ಸಾಹ ಕೊಡುತ್ತಾ ಹೋದರೆ ನಾವು ಯಾರ ಓಟನ್ನು ಸಂಪಾದಿಸಿ ಇಲ್ಲಿಗೆ ಬಂದಿದ್ದೇವೆಯೋ ಅವರ ಕಲ್ಯಾಣ ಮಾಡಿದಂತಾಗುತ್ತದೆ ಎಂದು ನಾನು ಮಾತ್ರ ತಿಳಿದುಕೊಂಡಿಲ್ಲ. ಯಾವ ಮಾಲು ಹಳ್ಳಿಯಲ್ಲಿ ತಯಾರಾಗುವುದಕ್ಕೆ ಶಕ್ಯ ಇಲ್ಲ, ಮಾಡುವುದಕ್ಕೆ ಶಕ್ಯ ಇಲ್ಲ ಅಂಥಾದಕ್ಕೆ, ಫ್ಯಾಕ್ಟರಿ ಶುರುಮಾಡಿ. ಸಾಮಾನ್ಯವಾಗಿ ಇಲ್ಲಿಯವರೆಗೂ ಇದ್ದಂಥ ಸರ್ಕಾರದ ಒಂದು ನೀತಿ ಏನೆಂದರೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ, ಸಿಟಿಗಳಲ್ಲಿ ಈ ಉದ್ಯೋಗಗಳನ್ನು ಶುರುಮಾಡುವಂಥ ಒಂದು ನೀತಿ ಇದೆ. ಬೆಂಗಳೂರು ಹಿಂದೆ ಎಂಥಾ ಸಣ್ಣ ಊರಾಗಿತ್ತು, ಇವತ್ತು ದೊಡ್ಡ ಊರಾಗಿ ನಡೆದಿದೆ. ಆದರೆ ನಮ್ಮ ಸರ್ಕಾರದವರಿಗೆ ನಾನು ವಿನಂತಿ ಮಾಡಿಕೊಳ್ಳ ಬಯಸುತ್ತೇನೆ: ಅದೇನೆಂದರೆ ಇನ್ನು ಮುಂದಾದರೂ ದೊಡ್ಡ ಫ್ಯಾಕ್ಟರಿಗಳಿಗೆ ಇಲ್ಲಿ ಕೊಡುವಂಥ ಲೈಸೆನ್ಸ್‌ಗಳಿಗೆ ಸ್ವಲ್ಪ ತಡೆಹಾಕಬೇಕು

Mr. SPEAKER.—I have been very carefully listening to the Hon'ble Member. The purpose of the Bill is a specific one, namely, the establishment of a Khadi and Village Industries Board. No doubt, the Hon'ble Member is dealing with an important subject, namely, the utility of the village industries. But it is not relevant here. By the way the Hon'ble

(MR. SPEAKER.)

Member may refer to it incidentally. I Therefore request him to come to the point, namely, the establishment of the Board, its functions and other ancillary matters instead of dealing with the utility or the benefits of village industries.

ಶ್ರೀ ವಿ. ಟಿ.ಮಾಗಡಿ.—ಸ್ವಾಮಿ, ತಾವು ಹೇಳುವುದನ್ನೇ ನಾನೂ ಹೇಳುತ್ತಿದ್ದೇನೆ. ಈ ದಿವಸ ಗ್ರಾಮೋದ್ಯೋಗಗಳಿಗೆ ಅತ್ಯಂತ ಪ್ರಾಶಸ್ತ್ಯ ಕೊಡಬೇಕು, ಪ್ರತಿಯೊಂದು ಹಳ್ಳಿಯಲ್ಲೂ ಸ್ಥಾಪಿಸಬೇಕು, ಇರುವ ಉದ್ಯೋಗಗಳಿಗೆ ಉತ್ತೇಜನ ಕೊಡಬೇಕು ಎಂಬ ನೀತಿಯನ್ನು ಸರ್ಕಾರದವರು ಈ ದಿವಸ ಅನುಸರಿಸಬೇಕೆಂದು ನಿಶ್ಚಯ ಮಾಡಿರುವುದು ಒಳ್ಳೆಯದು, ಆನಂದದ ಸಂಗತಿ. ಅದರ ಜೊತೆಗೆ ನಾನೊಂದು ಮಾತನ್ನು ಹೇಳಬಯಸುತ್ತೇನೆ. ಅದೇನೆಂದರೆ ನಮ್ಮ ಕೆಲವು ಹಳ್ಳಿಗಳಲ್ಲಿ ಅಕ್ಕಿ ಕುಟ್ಟುವ ಉದ್ಯೋಗವಿದೆ. ಆ ಭಾಗದಲ್ಲಿ ನಮ್ಮ ಸರ್ಕಾರದವರು ಕೆಲ ಕೆಲವು ಕಡೆ ರೈಸ್ ಹಲ್ಲರ್‌ಗಳಿಗೆ ಲೈಸೆನ್ಸ್ ಕೊಡುತ್ತಿದ್ದಾರೆ. ಅದು ನಮ್ಮ ಕಣ್ಣಿಗೆ ಕಾಣುತ್ತಿದೆ.

ಅಧ್ಯಕ್ಷರು.—ಹಿಂದೆ ಹೇಳಿದ ಮಾತನ್ನೇ ಮತ್ತೆ ಹೇಳಬೇಕಾಗಿದೆ. ಅಕ್ಕಿ ಕುಟ್ಟುವ ಉದ್ಯೋಗ ಮತ್ತು ಅದಕ್ಕೆ ಲೈಸೆನ್ಸ್ ಕೊಡುವ ವಿಚಾರ ಈಗ ನಮ್ಮ ಮುಂದಿಲ್ಲ. ಬೋರ್ಡ್ ಮಾಡಬೇಕೆಂದಿರುವುದರ ಬಗ್ಗೆ ಮಾತನಾಡಬೇಕು. ಅದರ ಆವಶ್ಯಕತೆಯಿದೆಯೆ, ಇಲ್ಲವೆ ಎಂಬ ಬಗ್ಗೆ ನಾಲ್ಕು ಮಾತನಾಡಬೇಕು. ಅದು ಬಿಟ್ಟು ಗೃಹ ಕೈಗಾರಿಕೆ ಮತ್ತು ಗ್ರಾಮೋದ್ಯೋಗದ ಬಗ್ಗೆ ಮಾತನಾಡುತ್ತಾ ಹೋದರೆ ಇಡಿಯ ದಿವಸ ಮಾತನಾಡಿದರೂ ತೀರುವುದಿಲ್ಲ. ಅದು ಸರಿಯಾದ ಮಾತೂ ಆಗಲಾರದು. ಆದ್ದರಿಂದ ಈ ಬೋರ್ಡಿನ ವಿಚಾರದಲ್ಲಿ ಏನಾದರೂ ಇದ್ದರೆ ಹೇಳಿದರೆ ಸಾಕು ಎಂದು ಪುನಃ ವಿನಂತಿ ಮಾಡಿಕೊಳ್ಳುತ್ತೇನೆ.

Sri V. T MAGADI.—Sir, in the Statement of Objects and Reasons there is one sentence. "The functions of the proposed Board are to prepare and organise schemes for the production and development of Khadi and Village Industries, including training of personnel."

Mr. SPEAKER.—That is exactly what I say. ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಬೋರ್ಡ್ ರಚಿಸಲು ಈ ಮಸೂದೆಯನ್ನು ತರಲಾಗಿದೆ. ಆ ಬೋರ್ಡಿನ ಆವಶ್ಯಕತೆಯಿದೆಯೆ ಎಂಬ ವಿಷಯವನ್ನು ಕುರಿತು ಮಾತ್ರ ಹೇಳಬೇಕೆಂದು ವಿನಂತಿಮಾಡುತ್ತೇನೆ.

ಶ್ರೀ ವಿ. ಟಿ. ಮಾಗಡಿ.—ಈ ಬೋರ್ಡಿನ ಕೆಲಸ ಸುಗಮವಾಗಿ ಸಾಗಬೇಕು. ಈ ಬೋರ್ಡಿನ ಉದ್ದೇಶ ನ್ಯಾಯವಾದರೂ ಈ ದಿವಸ ಬರಬಹುದಾದ ಅಡಚಣೆಯ ವಿಷಯವನ್ನು ಹೇಳಬಯಸುತ್ತೇನೆ. ಸರ್ವೇಸಾಧಾರಣವಾಗಿ ನೌಕರರು ಈ ಖಾದಿ ಮತ್ತು ಗ್ರಾಮೋದ್ಯೋಗದಲ್ಲಿ ತಮ್ಮದೇ ಈ ಉದ್ಯೋಗವೆಂಬ ದೃಷ್ಟಿಯಿಂದ ಕೆಲಸ ಮಾಡಬೇಕು. ಈ ಉದ್ಯೋಗದಲ್ಲಿ ತೊಡಗಿರುವ ಜನರು, ಬೋರ್ಡಿನವರು ಸರ್ಕಾರಿ ನೌಕರರ ಸಹಾಯ ಅಥವಾ ಉಪದೇಶ ಕೇಳಿದಾಗ ತಕ್ಷಣ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಡೆಯದಾಗಿ ಒಂದು ಮಾತನ್ನು ಹೇಳಬಯಸುತ್ತೇನೆ. ಅದೇನೆಂದರೆ ಈ ಬೋರ್ಡನ್ನು ಸರ್ಕಾರದವರು ಸ್ಥಾಪನೆ ಮಾಡುವ ಮುಂದೆ ಈ ಉದ್ಯೋಗಗಳು ಯಾರಿಗೆ ಆಶ್ರಯವಾಗಿವೆಯೋ ಯಾರಿಗೆ ಇದರಿಂದ ಜೀವನ ನಡೆಯುತ್ತಿದೆಯೋ, ಯಾರಿಗೆ ನಿಜವಾಗಿಯೂ ಒಂದು ಹುಮ್ಮಸ್ಸಿದೆಯೋ ಅಂಥವರನ್ನು ಬೋರ್ಡಿಗೆ ಹಾಕಬೇಕೇ ವಿನಾ ಯಾವುದೋ ಒಂದು ಪಕ್ಷಕ್ಕೆ ಅಥವಾ ರಾಜಕೀಯ ಪಕ್ಷಕ್ಕೆ ಮಾತ್ರ ಅವಕಾಶ ಕೊಡಬಾರದು. ಕೇವಲ ಬಡ ಮನುಷ್ಯನ ಕಡೆಗೆ ಹೆಚ್ಚು ಗಮನ ಕೊಡಬೇಕು.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಶ್ರೀಮಾನ್ ಇಮಾಂ ಸಾಹೇಬರು ಈ ಮಸೂದೆಯ ಮೇಲೆ ಮಾತನಾಡುತ್ತಾ ಇಂಗ್ಲೀಷಿನಲ್ಲಿ 'blowing both hot and cold' ಎಂದು ಹೇಳುವ ಹಾಗೆ ವಿರುದ್ಧವಾದ ಅರ್ಥಬರುವ ಮಾತನ್ನಾಡಿ ಪರವಾಗಿಯೂ ವಿರೋಧವಾಗಿಯೂ ಎರಡನ್ನೂ ಅವರೇ ಹೇಳುತ್ತಿದ್ದರು. ಖಾದಿ ಬದಲು ಸ್ವದೇಶಿ ಸಾಮಾನುಗಳನ್ನು ಉಪಯೋಗಿಸಬೇಕೆಂದು ಅವರು ಹೇಳಿದರು, our sole aim must be Swadeshi instead of Khadi ಎಂದು ಹೇಳಿದರು. ಇಮಾಂ ಸಾಹೇಬರು ಈ ದಿವಸ ಅಸೆಂಬ್ಲಿ ಮುಗಿಸಿಕೊಂಡು ಊಟಕ್ಕೆ ಹೋದಾಗ ಪಾಪ ವೇಳೆಯಾಗಿತ್ತು. ಸುಮಾರು $2\frac{1}{2}$ ಘಂಟೆಯಾಗಿತ್ತು ಎಂದು ಕಾಣುತ್ತದೆ. ಊಟ ಮಾಡಿ ಸ್ವಲ್ಪ ಹೊತ್ತು ನಿದ್ದೆ ಮಾಡಬೇಕಾಗಿತ್ತೋ ಏನೋ, ನಿದ್ರೆ ಮಾಡುವುದಕ್ಕೆ ಅವಕಾಶವಿಲ್ಲದೆ ಹಾಗೆಯೇ ಪುನಃ ಇಲ್ಲಿಗೆ ಬಂದು ಕುಳಿತದ್ದರಿಂದ ಸ್ವಪ್ನದಲ್ಲಿ ಮಾತನಾಡುವಂತೆ ಮಾತನಾಡುತ್ತಿದ್ದರೆಂಬ ಭಾವನೆಯಿದೆ. ಖಾದಿ ಸ್ವದೇಶಿ ಅಲ್ಲ ಎಂಬ ಭಾವನೆ ಅವರಿಗಿದೆ. ಇದಲ್ಲದೆ, ಸ್ವದೇಶಿ ಸಾಮಾನುಗಳನ್ನೇ ಉಪಯೋಗಿಸಬೇಕೆಂದು ಬಹಳ ಜೋರಾಗಿ ಹೇಳಿದರು. ಖಾದಿ ಸ್ವದೇಶಿ ಎಂಬುದು ಎಲ್ಲರೂ ಅರಿತ ವಿಷಯ. ಆದ್ದರಿಂದ ಅವರು ಎಷ್ಟೋ ಕಷ್ಟಪಟ್ಟು ವಾದಮಾಡಿದರೂ ಅದರಲ್ಲಿ ತಿರುಳಿಲ್ಲವೆಂದು ಅವರೇ ತೋರಿಸಿದ ಹಾಗಾಯಿತು. ಮತ್ತು ಈ ಬೋರ್ಡಿನ ಕೆಲಸ ಕಾರ್ಯ ನಡೆಯುವುದು ಅಸಮರ್ಪಕವಾಗಿ ಕಾಣುತ್ತದೆ. ಇದಕ್ಕೆ ಅಧಿಕಾರಿಗಳನ್ನು ನೇಮಕಮಾಡತಕ್ಕ ಕಾಲದಲ್ಲಿ ಒಂದು ರಾಜಕೀಯ ದೃಷ್ಟಿಯಿಂದ ಕಾಂಗ್ರೆಸ್ ಪಕ್ಷದವರನ್ನೇ ನೇಮಿಸುತ್ತಾರೆ ಇತ್ಯಾದಿ, ಇತ್ಯಾದಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು. ಅದರೆ ಆಕ್ಷೇಪಣೆ ಮಾಡತಕ್ಕದ್ದು ಒಂದು ವಿಧದಲ್ಲಿ ಅವರ ದೃಷ್ಟಿಯಿಂದ ಸರಿಯಾಗಿರಬಹುದು. ಡಿಸ್ಕ್ರಿಮಿನೇಟರಿಯಾಗಿ ಒಂದು ಲೆಜಿಸ್ಲೇಷನ್ ಮಾಡುತ್ತಿರುವುದಾಗಿ ಬೇರೆ ಹೇಳಿದರು. ಖಾದಿ ಹಾಕಿಕೊಳ್ಳುವವರು ಮಾತ್ರ ಈ ಬೋರ್ಡಿನಲ್ಲಿ ಸದಸ್ಯರಾಗಿರಬೇಕೆಂದಿದೆ. ಅದು ಸರಿಯಲ್ಲ ಎಂದು ಹೇಳಿದರು. ಸ್ವಾಮಿ, ಅವರೇ ಯೋಚನೆ ಮಾಡಲಿ ಖಾದಿ ಹಾಕಿಕೊಳ್ಳದಿರುವವರನ್ನು ಖಾದಿ ವಿಚಾರದಲ್ಲಿ ಅದರ ಎಕನಾಮಿಕ್ಸ್ ಅದರ ಫಿಲಾಸಫಿಯಲ್ಲಿ ನಂಬಿಕೆಯಿಲ್ಲದಿರುವವರನ್ನು ಈ ಬೋರ್ಡಿನ ಸದಸ್ಯರನ್ನಾಗಿ ಮಾಡಿ ಕೆಲಸಕಾರ್ಯ ಮಾಡಬೇಕೆಂದು ಹೇಳಿದರೆ ಕುರಿ ಕಾಯುವುದಕ್ಕೆ ತೋಳವನ್ನು ನೇಮಕ ಮಾಡಿದ ಹಾಗಾಗುತ್ತದೆ. ಆದ್ದರಿಂದ ಆ ರೀತಿಯಾಗಿ ನಾವು ಮಸೂದೆಯಲ್ಲಿ ಒಂದು ಪ್ರಾವಿಷನ್ ಮಾಡಿರತಕ್ಕದ್ದು ಬಹಳ ಸೂಕ್ತವಾದದ್ದು. ಹಾಗಿಲ್ಲದಿದ್ದರೆ ಈ ಖಾದಿ ಬೋರ್ಡಿನ ಮತ್ತು ವಿಲೇಜ್ ಇಂಡಸ್ಟ್ರೀಸ್ ಬೋರ್ಡಿನ ಉದ್ದೇಶವೇನಿದೆ ಅದು ಎಳ್ಳಷ್ಟೂ ಸಫಲವಾಗುವುದಿಲ್ಲ. ಏನಾದರೂ ಇತರ ಪಕ್ಷದ ಜನರಿಗೂ

ಇದರಲ್ಲಿ ಸ್ಥಾನ ಮಾನಗಳಿರಬೇಕೆಂಬ ಉದ್ದೇಶದಿಂದ ಶ್ರೀಮಾನ್ ಇಮಾಂ ಸಾಹೇಬರು ಹೇಳಿದ್ದರೆ ಅದನ್ನು ಬೇಕಾದರೆ ನಾವು ಒಪ್ಪೋಣ. ಯಾವ ಪಕ್ಷದವರೇ ಆಗಲಿ, ಕಾಂಗ್ರೆಸ್, ಪಿ.ಎಸ್.ಪಿ. ಅಥವಾ ಸೋಷಿಯಲಿಸ್ಟ್ ಪಕ್ಷದವರಾಗಲಿ, ಖಾದಿಯಲ್ಲಿ, ಗ್ರಾಮ ಕೈಗಾರಿಕೆಗಳಲ್ಲಿ ಅವರಿಗೆ ಸಂಪೂರ್ಣ ನಂಬಿಕೆಯಿರುವುದಾದರೆ ಅಂಥವರು ಸದಸ್ಯರಾಗಬಹುದು. ಆದರೆ ಅವರು ಖಾದಿಧಾರಿಗಳಾಗಿ ಖಾದಿಯ ಆರ್ಥಿಕ ತತ್ತ್ವದಲ್ಲಿ ಸಂಪೂರ್ಣ ನಂಬಿಕೆಯುಳ್ಳವರಾಗಿದ್ದರೆ ಮಾತ್ರ ಸದಸ್ಯರಾಗಲಿ ಎಂಬುದೇ ನಮ್ಮ ಮುಖ್ಯೋದ್ದೇಶ. ನಮ್ಮ ಸ್ನೇಹಿತರಾದ ಶ್ರೀ ಪಾಗಡಿಯವರು ಮಾತನಾಡುವಾಗ ಒಂದು ಮಾತನ್ನು ಕೊನೆಯಲ್ಲಿ ಹೇಳಿದ್ದಾರೆ ಪಕ್ಷದ ದೃಷ್ಟಿಯಿಂದ, ರಾಜಕೀಯ ದೃಷ್ಟಿಯಿಂದ ಈ ಕಾರ್ಯ ಚಟುವಟಿಕೆ ನಡೆಯಬಾರದು, ಆ ರೀತಿಯ ಜನರು ಇಲ್ಲಿರಬಾರದು, ಸಂಪೂರ್ಣ ನಂಬಿಕೆಯಿರುವವರು, ಗ್ರಾಮೋದ್ಯೋಗಗಳಲ್ಲಿ ಪೂರ್ಣ ವಿಶ್ವಾಸವುಳ್ಳವರು, ಕೆಲವು ಕಾಲ ಈ ಬಗ್ಗೆ ಕೆಲಸವನ್ನು ಬೇರೆ ಸಂದರ್ಭದಲ್ಲಿ ಮಾಡಿರುವವರು ಈ ಬೋರ್ಡಿನ ಸದಸ್ಯರಾಗಿರಬೇಕು ಎಂದು ಸಲಹೆ ಮಾಡಿರುವುದನ್ನು ಸಂಪೂರ್ಣವಾಗಿ ಸಮರ್ಥನೆ ಮಾಡಿ ಈ ಬೋರ್ಡ್ ರಚನೆ ಮಾಡುವುದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ ನಾನು ಸರ್ಕಾರದಲ್ಲಿ ಮನವಿ ಮಾಡುವುದೇನೆಂದರೆ : ಕೆಲವು ಕಡೆ ಈ ಖಾದಿ ಮತ್ತು ಗ್ರಾಮ ಕೈಗಾರಿಕಾ ಬೋರ್ಡು ಸ್ಥಾಪನೆಯಾಗಿರುವ ಕಡೆ ಈಗಾಗಲೆ ಅನೇಕ ದೋಷಾರೋಪಣೆಗಳು ಬಂದಿವೆ, ಕೆಲಸ ಕಾರ್ಯ ಸಮರ್ಪಕವಾಗಿ ನಡೆಯುತ್ತಿಲ್ಲವೆಂಬ ಕೂಗಿದೆ. ಇದನ್ನೆಲ್ಲ ಸರ್ಕಾರ ಗಮನಿಸಬೇಕು. ಇದಕ್ಕಾಗಿ ಸುವ್ಯವಸ್ಥಿತವಾದ ನೀತಿಯನ್ನನುಸರಿಸಿ ಯಾವಯಾವ ರೀತಿ ಹೇಗೆ ವ್ಯವಸ್ಥೆಯಾಗಬೇಕೋ ಯಾವ ರೀತಿಯಾದ ಸರ್ಕಾರದ ಮೇಲ್ವಿಚಾರಣೆಯಿರಬೇಕೋ ಅದಕ್ಕೆಲ್ಲಾ ಸರ್ಕಾರ ಏರ್ಪಾಡು ಮಾಡಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಮಾಡಿ ಈ ಮಸೂದೆಯನ್ನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ.

*Sri S. SRINIVASA IYENGAR (T. Narasipur).—Sir, I rise to place my observations on this Bill before this House.

I have heard with rapt attention the views of the Hon'ble Members who have spoken just now. The Legislative Assembly of the old Mysore enacted a law of a similar nature. In the statement of Objects and Reasons, the Government say that the Board constituted under that enactment was an advisory character. I would like to know how they have improved that position now. The composition of the Board is purely of a nominated character. All the Members of the Board are nominated by the Government. The Party in power is the Congress. So the Government will nominate mostly their own men. I had stated previously that an element of election should be introduced,—election amongst both the producing centres and the village industries. No doubt then the Government said that it was impracticable. But now the activities that will be extended to village industries are limited to the industries stated in the schedule. This Board will have nothing to do with the rest of the village industries. The board will have its operations in respect of industries contained in the schedule printed under the Act. When the composition of the Board is purely of a nominated character and when the budget is to be sanctioned by the Government, when its supplementary budget has to be sanctioned by the Government and when its annual programme has to be approved of by the Government alone, how is this Board different from a department of Government? We are having several departments of Government. We are having Industries Department. We are having a village industries Department. We are having the Rural industrialisation scheme. So many departmets we have created under the Government already. In what way will this Board improve the position is my question. If every pie of the expenditure must receive the sanction of the Government, if every programme must receive their sanction, if even the supplementary programme must receive the sanction of the Government and if the power to fill vacancies is also vested in the Government, what is it that is of a statutory character that this Bill will confer on the Board? It would be nothing but a duplication. It is not as though that nothing was done in the old Mysore State in respect of Khadi development. We have the Badanaval Centre. We had the Imangala Centre. Then the Government of Mysore was spending a sum of ten lakhs within its own resources. Therefore I feel, Sir, that the Bill does not satisfy the object that the Government have in their view. Sir, the activities of this Board extend not only to the actual development of Khadi, but also to village industries. In that context, how does the Government justify the disqualification as shown by my Hon'ble friend? Why should a person interested in village industries—village

(SRI S. SRINIVASA IYENGAR.)

gana, or smithy, wear khadi ? Nothing prevents him from wearing Khadi. In fact we want him to wear. But why should the Bill introduce this disqualification under the statute ? What is it that they are aiming at ? Have they made up their mind to nominate to the Board members of their own party ? Or have they something else in their mind ? Suppose that disqualification was not there ; how does it work ? Suppose a person is nominated to the Board ; for how long should he be wearing khadi ? Should he be a person who would wear khadi always or one who is wearing khadi for a number of years, or one who takes to it today or after enactment of this law ? It makes very little meaning. Therefore I submit that Government should see the force of the argument. It is not as though we are against the village industries or Khadi. Nothing of the kind. When they want a legislation to be passed by this House, it must really reflect the view they have. They have stated in the statement of objects and reasons, that this piece of legislation is to avoid delay. To reserve for themselves these powers to sanction the budget, sanction programme to sanction supplementary budget, would not conduce to saving of time and avoid delay at all.

Therefore I submit that the Government should consider these aspects and change the respective provisions.

ಶ್ರೀ ಅನಂತರಾಮನ್ (ಚಾಮರಾಜಪೇಟೆ).—ಈ ಬಿಲ್ಲನ್ನು ನಾನು ಸ್ವಾಗತಿಸುತ್ತೇನೆ. ಇದು ಮೊದಲೇ ಶಾಸನವಾಗಿದ್ದರೆ ಚೆನ್ನಾಗಿತ್ತು. ಈ ವಿಚಾರವಾಗಿ ಈಗಾಗಲೇ ಶ್ರೀ ಮಾಗಡಿಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ಆದ್ದರಿಂದ ನಾನು ಏನು ಹೆಚ್ಚಾಗಿ ಹೇಳಬೇಕಾಗಿಲ್ಲ. ಈ ರೀತಿಯ ಬೋರ್ಡುಗಳನ್ನು ಈಗಾಗಲೇ ಅನೇಕ ಕಡೆ ಸ್ಥಾಪಿಸಿದ್ದಾರೆ. ಈ ರೀತಿ ಸ್ಥಾಪಿತವಾಗಿರುವ ಬೋರ್ಡುಗಳಿಗೆ ಈಗ ಕೇಂದ್ರದಿಂದ ಸಹಾಯ ಕೂಡ ದೊರಕುತ್ತಾ ಇದೆ. ಇದರಿಂದ ಸಾವಿರಾರು ಬಡ ಜನರಿಗೆ ಸಹಾಯವಾಗುತ್ತದೆ. ಇಂತಹ ಒಂದು ಉದ್ಯಮದ ಶಾಸನವನ್ನು ನಾವು ಸಂತೋಷದಿಂದ ಸ್ವಾಗತಿಸುವುದು ನಮ್ಮ ಕರ್ತವ್ಯವಾಗಿದೆ. ಇಂತಹ ಕಾನೂನನ್ನು ಶ್ರೀ ಇಮಾಂರವರು ಏಕೆ ವಿರೋಧಿಸುತ್ತಿದ್ದಾರೋ ನನಗೆ ಆಶ್ಚರ್ಯವಾಗುತ್ತಿದೆ. ಹಿಂದಿನ ಶಾಸನ ಸಭೆಯಲ್ಲಿಯೂ ಇದೇ ರೀತಿಯ ಮಸೂದೆಯನ್ನು ವಿರೋಧಿಸಿದರು. ಇದನ್ನು ವಿರೋಧಿಸುವುದಕ್ಕೆ ಕಾರಣ ನನಗೆ ತಿಳಿದಮಟ್ಟಿಗೆ ಈ ರೀತಿ ಕಾಣುತ್ತದೆ. ನಾನೂ ಕೂಡ ಅವರ ಊರಾದ ಜಗಳೂರಿಗೆ ಹೋಗಿದ್ದೆ. ಅಲ್ಲಿದ್ದ ಅಸೆಂಬ್ಲಿ ಸದಸ್ಯರು ಸಹಕಾರ ಸಂಘದ ತತ್ವದಮೇಲೆ ಒಂದು ಗಿರಣಿಯನ್ನು ಮಾಡಬೇಕೆಂದು ಇದ್ದರು. ಜಗಳೂರಿನಲ್ಲಿ ಆ ರೀತಿ ಒಂದು ಗಿರಣಿಯನ್ನು ಮಾಡಿದರೆ ನೂರಾರು ಜನರಿಗೆ ಅನುಕೂಲವಾಗುತ್ತದೆ ಎಂಬ ಅರ್ಥದಿಂದ ಆ ರೀತಿ ಆಲೋಚಿಸಿರಬಹುದು. ಅದಕ್ಕಾಗಿ ಅವರು ವಿರೋಧಿಸಿದ್ದಾರೋ ಏನೋ ಎಂಬ ಶಂಕೆ ಬರುತ್ತದೆ. ಎರಡನೆದಾಗಿ ಖಾದಿ ಬಟ್ಟೆಯನ್ನು ಯಾರು ಹಾಕಿಕೊಳ್ಳುವುದಿಲ್ಲವೋ, ಅದರಲ್ಲಿ ಯಾರಿಗೆ ನಂಬಿಕೆಯಿಲ್ಲವೋ, ಅಂತಹವರು ಈ ಬೋರ್ಡಿನಲ್ಲಿರಕೂಡದು ಎಂದು ಹೇಳಿರುವುದನ್ನು ಟೀಕಿಸಿದರು. ಇದನ್ನು ನೋಡಿದರೆ ಇಂಗ್ಲಿಷ್ ವೈದ್ಯ ತಿಳಿದವರನ್ನು ಆಯುರ್ವೇದ ಮತ್ತು ಯುನಾನಿ ವೈದ್ಯಕ್ಕೆ ಬದಲಾಯಿಸಿಕೊಳ್ಳಬೇಕೆಂದು ಹೇಳಿದರೆ ಎಷ್ಟರಮಟ್ಟಿಗೆ ಚೆನ್ನಾಗಿರುತ್ತದೆಯೋ ಹಾಗಾಗುತ್ತದೆಂದು ಎನ್ನಿಸಿತು. ಆದ್ದರಿಂದ ಇವುಗಳನ್ನೆಲ್ಲಾ ಯೋಚನೆಮಾಡಿ ಸರ್ಕಾರದವರು ಇಂತಹ ಒಂದು ಒಳ್ಳೆಯ ಶಾಸನವನ್ನು ತಂದಿದ್ದಾರೆಂದು ತಿಳಿದುಕೊಂಡಿದ್ದೇನೆ. ಯಾವ ಪಾರ್ಟಿಗೆ ಸೇರಿರಲಿ, ಪಿ. ಎಸ್. ಪಿ. ಆಗಿರಲಿ, ಸೋಷಿಯಲಿಸ್ಟ್ ಆಗಿರಲಿ, ಅವರಿಗೆ ಇದರಲ್ಲಿ ಪೂರ್ಣ ನಂಬಿಕೆಯಿರಬೇಕು ಅಂತಹವರು ನ್ಯಾಯವಾಗಿ ಈ ಬೋರ್ಡಿನಲ್ಲಿರಬೇಕೆಂದು ಮಸೂದೆಯಲ್ಲಿ ತೋರಿಸಿದ್ದಾರೆ. ಈ ವಿಚಾರವಾಗಿ ಹಿಂದೆಯೇ ಶ್ರೀ ಕೆ. ಪಟ್ಟಾಭಿರಾಮನ್ ಅವರೂ ಕೂಡ ಚೆನ್ನಾಗಿ ಹೇಳಿದ್ದಾರೆ. ಖಾದಿಯಲ್ಲಿ ಅಷ್ಟು ನಂಬಿಕೆಯಿಲ್ಲದಿದ್ದರೆ, ಶ್ರೀ ಇಮಾಂರವರು ಮೂರು ವರ್ಷಗಳ ಹಿಂದೆಯೇ ಈ ರೀತಿ ಗಿರಣಿ ಮಾಡುತ್ತಿದ್ದರು.

ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರ್.—ಜಮಂಗಲದ ಖಾದಿ ಕೇಂದ್ರವನ್ನು ಶ್ರೀ ಇಮಾಂರವರೇ ಪ್ರಾರಂಭಿಸಿದರು.

ಶ್ರೀ ಆರ್. ಅನಂತರಾಮನ್.—ಅಂಥ ಶ್ರೀ ಇಮಾಂ ಅವರು ಈಗ ಈ ರೀತಿಯಾಗಿ ಮಾತನಾಡಿದುದಕ್ಕಾಗಿ ನನಗೆ ವ್ಯಥೆಯಾಗಿದೆ.

5 P.M.

ಇನ್ನೊಂದು ವಿಚಾರ. ಅವರು ಖಾದಿ ಬಹಳ ಒರಟಾಗಿರುವುದರಿಂದ ಹಾಕಿಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ತಿಳಿದುಕೊಂಡು ಇರಬಹುದು. ಸಮತಾವಾದ ರಾಜ್ಯ ಕಟ್ಟಬೇಕು ಎಂದು ಹೇಳುತ್ತಾರೆ. ಅವರು ಪ್ರಜಾಸೋಷಿಯಲಿಸ್ಟ್ ಪಕ್ಷಕ್ಕೆ ಸೇರಿದವರು. ಅವರು ನಯವಾದ ಬಟ್ಟೆಗಳನ್ನು ಹಾಕಿಕೊಂಡು ಪಟ್ಟಣಗಳಲ್ಲಿರುವವರು. ಹಳ್ಳಿಯವರೊಡನೆ ಸೇರುವುದಿಲ್ಲ. ಒರಟು ಬಟ್ಟೆ ಹಾಕಿಕೊಳ್ಳುವವರನ್ನು ದೂರವಿಡುತ್ತಾರೆ. ಇವರ ಮುಖಂಡರಾದ ಆಚಾರ್ಯ ಕೃಪಲಾನಿ, ರಾಮ ಮನೋಹರ್ ಲೋಹಿಯ ಇವರೆಲ್ಲರಿಗೂ ಖಾದಿಯಲ್ಲಿ ಪೂರ್ಣ ನಂಬಿಕೆ ಇದೆ. ಪ್ರತಿಯೊಬ್ಬರೂ ಅವರ ಪಾರ್ಟಿಯಲ್ಲಿ ಖಾದಿ ಹಾಕಬೇಕು, ಖಾದಿ ಮತ್ತು ಗ್ರಾಮ ಕೈಗಾರಿಕೆಯಲ್ಲಿ ನಂಬಿಕೆ ಇಡಬೇಕು ಎಂದು ಹೇಳುತ್ತಾರೆ. ಅವರು ಆ ರೀತಿ ನಟಿಸುತ್ತಾರೆಂದು ನನಗಾದರೂ ಎನ್ನಿಸುತ್ತದೆ. ಶ್ರೀಮಾನ್ ಇಮಾಂಸಾಹೇಬರೂ ಸಹ ಇದರ ಬಗ್ಗೆ ಅವರ ಅಭಿಪ್ರಾಯವನ್ನು ಬದಲಾವಣೆ ಮಾಡಿಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೇನೆ. ಇನ್ನು ಹೆಚ್ಚು ಹೇಳದೆ ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ಈ ಮಸೂದೆಯನ್ನು ನಾನು ಮನಃಪೂರ್ವಕವಾಗಿ ಸ್ವಾಗತಿಸುತ್ತೇನೆ ಮತ್ತು ಈ ವಿಚಾರದಲ್ಲಿ ಎರಡು ಮಾತುಗಳನ್ನಾಡಬೇಕೆಂದು ಇಚ್ಛೆಪಡುತ್ತೇನೆ. ಏಕೆಂದರೆ ಸಾಧಾರಣವಾಗಿ ನಮಗೆ ಸ್ವಾತಂತ್ರ್ಯ ಬಂದ ಲಾಗಾಯ್ತು ಖಾದಿ ಬಹಳ ಹೆಚ್ಚಿಗೆ ಉಪಯೋಗದಲ್ಲಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಇದುವರೆಗೂ ಬರುತ್ತಿದ್ದ ಖಾದಿ ಬಟ್ಟೆ ಬಹಳ ಒರಟಾಗಿದ್ದು ಬಣ್ಣ ಸರಿಯಾಗಿ ಇರುತ್ತಾ ಇರಲಿಲ್ಲ. ಈಗ ಬಹಳ ಸುಧಾರಣೆಯಾಗಿದೆ. ಆದರೆ ಅದರಲ್ಲಿ ಇನ್ನೂ ಡಿಸೈನುಗಳು ಬರುತ್ತಿಲ್ಲ. ಈಗ ಸ್ವಲ್ಪ ದಿವಸಗಳಿಂದ ಡಿಸೈನುಗಳನ್ನು ಹಾಕುವ ವಿಷಯದಲ್ಲಿಯೂ ಕೆಲವರು ಕೆಲಸ ಮಾಡುತ್ತಿದ್ದಾರೆ. ಕೈಮಗ್ಗ ಮತ್ತು ಸಣ್ಣ ಮಗ್ಗಗಳನ್ನಿಟ್ಟುಕೊಂಡು ಕೈಮಗ್ಗದ ಬಟ್ಟೆಗಳಲ್ಲಿ ಹೊಸ ಹೊಸ ನಮೂನೆಗಳನ್ನೂ ಡಿಸೈನುಗಳನ್ನೂ ಉತ್ಪನ್ನ ಮಾಡುತ್ತಿದ್ದಾರೆ. ಅದೇ ತರಹವಾಗಿ ಖಾದಿಯಲ್ಲಿ ಏಕೆ ಮಾಡುವುದಕ್ಕೆ ಬರುವುದಿಲ್ಲವೆನ್ನುವ ಪ್ರಶ್ನೆ ಏಳುತ್ತದೆ. ಖಾದಿಯನ್ನು ವಿಶೇಷವಾಗಿ ಉಪಯೋಗ ಮಾಡದೆ ಇರುವುದಕ್ಕೆ ಇದೇ ಕಾರಣವೆಂದು ನನಗೆ ಕಾಣುತ್ತದೆ, ಅಲ್ಲದೆ ಖಾದಿಯಲ್ಲಿ ಹೆಚ್ಚು ತೆಳುವು ಬರುವುದಿಲ್ಲ ಮತ್ತು ಡಿಸೈನುಗಳಲ್ಲಿ ಸರಿಯಾದ ನಮೂನೆಗಳಿಲ್ಲ. ಆದುದರಿಂದ ಜನರ ಮನಸ್ಸನ್ನು ಆಕರ್ಷಿಸುವ ಶಕ್ತಿ ಖಾದಿಗೆ ಬರುವುದಿಲ್ಲ, ಒಂದು ತತ್ತ್ವಕ್ಕೆ ಅಂಟಿಕೊಂಡು ತತ್ತ್ವನಿಷ್ಠೆಯಿಂದ ಖಾದಿಯನ್ನು ಹಾಕಬೇಕು ಎಂದು ಒಂದು ವ್ರತನಿಯಮದಿಂದ ಇರುವವರಿಗೆ ಮಾತ್ರ ಖಾದಿಯು ಹಿಡಿಸುತ್ತಿದೆ. ಆದುದರಿಂದ ಹೊಸ ರೀತಿಯಲ್ಲಿ ಖಾದಿಯನ್ನು ತಯಾರು ಮಾಡುವುದಕ್ಕೆ ಪ್ರಯತ್ನಪಟ್ಟು, ಹೊಸ ಹೊಸ ನಮೂನೆಗಳನ್ನು ಕಂಡು ಹಿಡಿದರೆ ಖಾದಿಯನ್ನು ಹೆಚ್ಚು ಉಪಯೋಗ ಮಾಡುವುದಕ್ಕೆ ಅವಕಾಶವಾಗಬಹುದು ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಇದರಲ್ಲಿ ಮತ್ತೊಂದು ವಿಚಾರವೆಂದರೆ ಖಾದಿ ಬೋರ್ಡ್ ಮಾಡಬೇಕಾದರೆ, ಅದರಲ್ಲಿ ಖಾದಿಯಲ್ಲಿ ಯಾರಿಗೆ ವಿಶ್ವಾಸವಿದೆ, ಯಾರಿಗೆ ಅದು ಬೇಕಾಗಿದೆ, ಯಾರು ಒಳ್ಳೆಯ ಮನಸ್ಸಿನಿಂದ, ಹೃದಯದಿಂದ ಕೆಲಸ ಮಾಡುತ್ತಾರೆ, ಅಂಥವರು ಇದ್ದರೆ ಒಳ್ಳೆಯದಾಗುತ್ತದೆ; ಬೇರೆಯವರಿದ್ದರೆ ಅಷ್ಟು ಚೆನ್ನಾಗಿ ಕೆಲಸ ನಡೆಯುವುದಿಲ್ಲ. ಸಾಕುಮಕ್ಕಳು ಮತ್ತು ಸ್ವಂತ ಮಕ್ಕಳು ಇದ್ದಹಾಗೆ ಆಗುತ್ತದೆ. ಇವೊತ್ತು ನಮಗೆ ಸ್ವಾತಂತ್ರ್ಯ ಬರಬೇಕಾದರೆ ಮೊದಲಿನ ಹಾದಿ ಖಾದಿ; ಗೃಹಕೈಗಾರಿಕೆ ಎಂದರೆ ಖಾದಿಯಾಗಿದೆ ಇವೊತ್ತು ಮನೆಯಲ್ಲಿ ಕುಳಿತ ಮುದುಕರು, ಹೆಣ್ಣುಮಕ್ಕಳು ಮುಂತಾದವರಿಗೆ ಒಂದು ತುತ್ತು ಅನ್ನಕ್ಕೆ ಮಾರ್ಗಮಾಡಿದುದು ಖಾದಿ. ಈ ಒಂದು ದೃಷ್ಟಿಯಿಂದ, ಉಪಯೋಗ ದೃಷ್ಟಿಯಿಂದ, ತತ್ತ್ವದೃಷ್ಟಿಯಿಂದ, ಹೇಗೆನೋಡಿದರೂ ಸಹ ಖಾದಿಯಿಂದ ಒಳ್ಳೆಯದಾಗುತ್ತದೆ. ಮಹಾತ್ಮ ಗಾಂಧಿಯವರು, ನೂಲನ್ನು ತೆಗೆಯಲು ರಾಟೆಯನ್ನು ತಿರುಗಿಸುವಾಗ 'ಓಂ' ಎಂದು 'ಹರಿ' ಎಂದು ನಾದ ಬರುತ್ತದೆಂದೂ ಹೇಳುತ್ತಿದ್ದರು. ಜನರ ಮನಸ್ಸನ್ನು ಆಕರ್ಷಣೆ ಮಾಡುವುದಕ್ಕೆ ಅವರು ಹೀಗೆ ಉಪದೇಶ ಮಾಡುತ್ತಿದ್ದರು. ಆ ಉಪದೇಶ ಸುಳ್ಳಲ್ಲ. ರಾಟೆಯಿಂದ ನೂಲುವುದರಲ್ಲಿ ಒಂದು ಬಗೆಯ ಶಾಂತಿ ದೊರೆಯುತ್ತದೆ. ಮನಸ್ಸು ನೆಮ್ಮದಿ ಇಲ್ಲದೆ ರಾಟೆಯ ಮುಂದೆ ಕುಳಿತುಕೊಂಡರೆ ನೂಲು ಸರಿಯಾಗಿ ಬರುವುದಿಲ್ಲ. ಮನಸ್ಸಿಗೆ ಶಾಂತಿ ತರುವ ನಿಷ್ಠೆಯನ್ನು ಬೆಳೆಸಬೇಕಾದವರು ಏಕಾಗ್ರತೆಯನ್ನು ಪಾಲಿಸಬೇಕಾದರೆ ನೂಲುವುದು ಕೇವಲ ಒಂದು ಸಾಧನವಾಗಿದೆ. ಇಂಥ ಪವಿತ್ರವಾದುದನ್ನು ತೆಗೆದು ಬಿಡಲು ಯಾರೂ ಒಪ್ಪುವುದಿಲ್ಲ. ಈಗ ನಮ್ಮ ಸರ್ಕಾರ ಬಂದ ಮೇಲಂತೂ ಅದನ್ನು ಬಿಡುವುದಕ್ಕೆ ಆಗುವುದಿಲ್ಲ. ಆದುದರಿಂದ ಈ ಖಾದಿ ಮತ್ತು ಗ್ರಾಮ ಕೈಗಾರಿಕೆಗಳಿಗೆ ಸಂಬಂಧಪಟ್ಟ ಮಸೂದೆಗೆ ನಾನು ಬೆಂಬಲ ಕೊಡುತ್ತೇನೆ, ಇದರ ಪ್ರಕಾರ ರಚಿಸುವ ಬೋರ್ಡಿನಲ್ಲಿ ಖಾದಿಯಲ್ಲಿ ಸಂಪೂರ್ಣ ಮನವರಿಕೆಯಾದಂಥ ಜನರನ್ನೂ ಮತ್ತು ನಂಬಿಕೆ ಇರತಕ್ಕ ಜನರನ್ನೂ ಹಾಕಬೇಕೆಂದು ಅರಿಕೆ ಮಾಡಿ ಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಖಾದಿ ಮತ್ತು ಗ್ರಾಮಾಂತರ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ, ಅವುಗಳನ್ನು ಉತ್ತಮಪಡಿಸುವುದಕ್ಕಾಗಿ ತಂದಿರುವ ಈ ಮಸೂದೆಯನ್ನು ಸ್ವಾಗತಿಸುತ್ತ ಒಂದೆರಡು ಮಾತುಗಳನ್ನು ನಿವೇದಿಸಿಕೊಳ್ಳಲು ಈ ಮಾನ್ಯ ಸಭೆಯಲ್ಲಿ ನಿಂತಿದ್ದೇನೆ. ಶ್ರೀ ಶ್ರೀನಿವಾಸ ಐಯ್ಯಂಗಾರ್ ಅವರು ಮಾತನಾಡುತ್ತಾ ಈ ಖಾದಿ ಬೋರ್ಡನ್ನು ಸ್ಥಾಪನೆ ಮಾಡತಕ್ಕದ್ದು ಸರ್ಕಾರದ ಒಂದು ಇಲಾಖೆಯನ್ನು ಸ್ಥಾಪನೆ ಮಾಡಿದಂತಾಗುತ್ತದೆ, ಅದಕ್ಕೆ ನಾಮಕರಣ ಮಾಡುವುದರಿಂದ ಅದರಲ್ಲಿ ನಮವರೇ ಬರುತ್ತಾರೆ. ನ್ಯಾಯವಾಗಿ ಅದಕ್ಕೆ ಚುನಾವಣೆ ಮಾಡಿದರೆ ಒಳ್ಳೆಯದು. ಅದೇ ಒಂದು ಸ್ವಂತ ಸಂಸ್ಥೆಯಾಗಿ ಮಾರ್ಪಾಟು ಆದರೆ ಆಗ ಕೆಲಸಕಾರ್ಯಗಳು ಬಹುಮಟ್ಟಿಗೆ ಹೆಚ್ಚಿನ ರೀತಿಯಲ್ಲಿ ನಡೆಯುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೆಹೋದ ಪಕ್ಷದಲ್ಲಿ.........

ಶ್ರೀ ಮಹಮ್ಮದ್ ಇಮಾಂ.—A point of information, Sir, ಮಾನ್ಯ ಸದಸ್ಯರು ಎಷ್ಟು ದಿವಸದಿಂದ ಖಾದಿ ಹಾಕುತ್ತಿದ್ದಾರೆ ಎಂಬುದನ್ನು ತಿಳಿಸಬೇಕು.

ಶ್ರೀ ಬಿ. ರಾಚಯ್ಯ.—1937ನೆಯ ಇಸವಿಯಿಂದಲೂ ಕೂಡ ನಾನು ಖಾದಿಯನ್ನು ಹಾಕುತ್ತಿದ್ದೇನೆ. ಮಧ್ಯೆ ನಾನು ಕಾಂಗ್ರೆಸ್ ಪಕ್ಷವನ್ನು ಬಿಟ್ಟುಹೋಗಿದುದು, ನಿಜ. ಖಾದಿ ಮತ್ತು ಗ್ರಾಮಾಂತರ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸತಕ್ಕ ಈ ಒಂದು ಬೋರ್ಡನ್ನು ನಾವು ಏನಾದರೂ ಚುನಾವಣೆಗಳ ಮುಖಾಂತರ ರಚನೆ ಮಾಡುವುದಾದರೆ ಅದರ ಕೆಲಸಕಾರ್ಯಗಳಲ್ಲಿ ಯಾರಿಗೆ ಹೆಚ್ಚಿನ ವಿಶ್ವಾಸವಿಲ್ಲವೋ, ಯಾರಿಗೆ ಖಾದಿ ಮತ್ತು ಗ್ರಾಮಕೈಗಾರಿಕೆಗಳಲ್ಲಿ ಹೆಚ್ಚಿನ ಶ್ರದ್ಧೆ ಇಲ್ಲವೋ ಅಂಥ ಜನ ಆ ಬೋರ್ಡಿಗೆ ಚುನಾಯಿಸಲ್ಪಟ್ಟರೆ ಆ ಬೋರ್ಡಿನ ಕೆಲಸಕಾರ್ಯಗಳು ನಿಂತು ಹೋಗಬಹುದು ಎಂಬ ಸಂಶಯ ಹುಟ್ಟಿದೆ. ಈ ಕಾರಣದಿಂದ ಇದು ಪೂರ್ಣವಾಗಿ ಸುವ್ಯವಸ್ಥಿತ ರೀತಿಯಲ್ಲಿ ನಡೆಯುವುದಕ್ಕೆ ಈ ಬೋರ್ಡಿಗೆ ನಾಮಕರಣ ಮಾಡಿದರೆ ಒಳ್ಳೆಯದೆಂದು ನಾನು ಭಾವಿಸಿಕೊಂಡಿದ್ದೇನೆ. ಇದುವರೆಗೂ ಈ ಬೋರ್ಡನ್ನು ರಚಿಸಲು ನಿಧಾನವಾದುದರಿಂದ ಖಾದಿ ಮತ್ತು ಗ್ರಾಮಕೈಗಾರಿಕೆಗಳಲ್ಲಿ ನಾವು ಎಷ್ಟರಮಟ್ಟಿಗೆ ಆಸಕ್ತಿಯನ್ನು ವಹಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣಪುಟ್ಟ ಕೈಗಾರಿಕೆಗಳನ್ನು ಆರಂಭಿಸಿಕೊಂಡಿರುವುದನ್ನು ಸರ್ಕಾರದಿಂದ ಒದಗಬಹುದಾದಂಥ ಸಹಾಯವನ್ನು ನಾವು ಬಯಸಿ ಬಹುಮಟ್ಟಿಗೆ ಮುಂದೆ ಹೋಗಿದ್ದೇವೆ. ಈಗ ತಂದಿರುವ ಮಸೂದೆಯನ್ನು ನಾವು ಸ್ವಾಗತಿಸಬೇಕೆಂಬುದಕ್ಕೆ ಕಾರಣವೇನೆಂದರೆ ಹಳ್ಳಿಗಾಡಿನಲ್ಲಿ ಯಾರೇ ಆಗಲಿ ಖಾದಿ ಮತ್ತು ಗ್ರಾಮಕೈಗಾರಿಕೆಗಳನ್ನು ಮಾಡುವುದಕ್ಕೆ ಪ್ರಯತ್ನಪಟ್ಟಾಗ ಅವರಿಗೆ ಬೇಕಾದಷ್ಟು ಕಚ್ಚಾ ಮಾಲನ್ನು ಮತ್ತು ಅವರಿಗೆ ಬೇಕಾಗಿರ

(ಶ್ರೀ ಬಿ. ರಾಚಯ್ಯ)

ತಕ್ಕ ಧನಸಹಾಯ ಮುಂತಾದುದನ್ನು ಒದಗಿಸಿಕೊಡುವ ಏರ್ಪಾಡನ್ನು ಈ ಮಸೂದೆಯಲ್ಲಿ ಇಟ್ಟಿರುವುದರಿಂದ ಇದನ್ನು ತಂದಿರುವುದು, ಬಹಳ ನಿಧಾನವಾದರೂ ಕೂಡ ಸ್ವಾಗತಿಸತಕ್ಕುದಾಗಿದೆ. ಅಲ್ಲದೆ ಹಳ್ಳಿಗಾಡಿನಲ್ಲಿ ಖಾದಿ ಮತ್ತು ಗ್ರಾಮಾಂತರ ಕೈಗಾರಿಕೆಗಳಲ್ಲಿ ಉತ್ಪನ್ನವಾದಂಥ ಪದಾರ್ಥಗಳನ್ನು ಮಾರಾಟ ಮಾಡುವುದಕ್ಕೆ ಕೂಡ ಒಂದು ಎಂಪೋರಿಯಂ ತೆರೆಯಬೇಕೆಂಬುದಕ್ಕೆ ಕೂಡ ಇದರಲ್ಲಿ ಅವಕಾಶವನ್ನು ಕಲ್ಪಿಸಿದ್ದಾರೆ. ಹಳ್ಳಿಗಳಲ್ಲಿ ಈ ಕೈಗಾರಿಕೆಗಳನ್ನು ಮಾಡಲು ಬೇಕಾದ ಶಿಕ್ಷಣವನ್ನು ಕೊಡುವ ಏರ್ಪಾಡನ್ನು ಮಾಡುವುದಕ್ಕೆ ಸಹ ಈ ಬೋರ್ಡ್ ಸಹಾಯ ಮಾಡುತ್ತದೆ. ಅದೇ ಉದ್ದೇಶದಿಂದಲೇ ಈ ಬೋರ್ಡನ್ನು ರಚಿಸುವುದು ನ್ಯಾಯಬದ್ಧವಾಗಿದೆ; ಈ ಮಸೂದೆಯನ್ನು ತಂದಿರುವುದು ಸ್ವಾಗತಾರ್ಹ. ಅದೂ ಅಲ್ಲದೆ ಅಲ್ಲಲ್ಲಿ ಗ್ರಾಮಾಂತರಗಳಲ್ಲಿ ಎಲ್ಲೆಲ್ಲಿ ಕಚ್ಚಾ ಮಾಲು ಸಿಕ್ಕುತ್ತದೆಯೋ ಅಲ್ಲೆಲ್ಲ ಸಣ್ಣಪುಟ್ಟ ಕೈಗಾರಿಕೆಗಳನ್ನು ಸ್ಥಾಪನೆಮಾಡಿ ಜನರಿಗೆ ಕೆಲಸವನ್ನು ಕೊಡತಕ್ಕ ಒಂದು ಉದ್ಯಮವನ್ನು ಇದರಲ್ಲಿ ಇಟ್ಟುಕೊಂಡಿರುವ ದೃಷ್ಟಿಯಿಂದಲೂ ಕೂಡ ಈ ಮಸೂದೆಯು ಸ್ವಾಗತಾರ್ಹವಾಗಿದೆ. ಅಲ್ಲದೆ ಈಗ ತಾವು ತಿಳಿದಮಟ್ಟಿಗೆ ನಾಲ್ಕು-ಆರು ತಿಂಗಳ ಹಿಂದೆ ನಮ್ಮ ದೇಶದಲ್ಲಿ ಅದರಲ್ಲೂ ಕೂಡ ಮೈಸೂರು ಜಿಲ್ಲೆಯಲ್ಲಿ ಮತ್ತು ಮಲೆನಾಡು ಪ್ರಾಂತದಲ್ಲಿ ಮಳೆ ಬೆಳೆ ಇಲ್ಲದೆ ಬಹುಮಟ್ಟಿಗೆ ಜನಗಳಿಗೆ ತಿನ್ನಲಿಕ್ಕೂ ಕೂಡ ಹೊಟ್ಟೆಗಿಲ್ಲದೆ ಸಂಕಟಪಡುತ್ತಾ ಇದ್ದ ಸಂದರ್ಭದಲ್ಲಿ ಈ ಖಾದಿಯನ್ನೇ ಅವಲಂಬಿಸಿರತಕ್ಕ ಜನ ಬಹುಮಟ್ಟಿಗೆ ತಮ್ಮ ಜೀವನವನ್ನು ನಡೆಸಿಕೊಳ್ಳುವುದಕ್ಕೆ ಖಾದಿಯು ಸಹಾಯಕವಾಯಿತು. ಅದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಉತ್ತಮಪಡಿಸುವುದಕ್ಕೂ ಮತ್ತು ಗ್ರಾಮಾಂತರ ಕೈಗಾರಿಕೆಗಳನ್ನು ವ್ಯವಸ್ಥೆಪಡಿಸುವುದಕ್ಕೂ ರಚಿಸಿ ತಂದಿರತಕ್ಕ ಈ ಮಸೂದೆ ಸಕಾಲಿಕವೂ ಸ್ವಾಗತಾರ್ಹವೂ ಆಗಿದೆ ಎಂದು ಹೇಳಿ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ-ಅನುಸೂಚಿತ ಜಾತಿಗಳು).—ಸ್ವಾಮಿ, ಖಾದಿ ಮತ್ತು ಗ್ರಾಮಕೈಗಾರಿಕೆಗಳ ಮಸೂದೆಯನ್ನು ಸಂಪೂರ್ಣವಾಗಿ ನಾನು ಸ್ವಾಗತಿಸುತ್ತೇನೆ, ಕೆಲವು ಸದಸ್ಯರುಗಳು ಇದು ಬರಿಯ ಕಾಂಗ್ರೆಸ್ಸಿನವರನ್ನು ಮಾತ್ರ ನಾಮಕರಣ ಮಾಡುವ ಉದ್ದೇಶದಿಂದ ತಂದಿರುವ ಕಾನೂನು ಎಂದು ಹೇಳಿದರು. ಅದಕ್ಕೆ ಸಾಕಾದಷ್ಟು ಆಧಾರವಿಲ್ಲ. ಸರ್ಕಾರದವರು ನೇಮಿಸತಕ್ಕ ಅನೇಕ ಕಮಿಟಿಗಳಲ್ಲಿ ಕಾಂಗ್ರೆಸ್ಸಿನವರಲ್ಲದೆ ಇರತಕ್ಕವರೂ ಸಹ ಸದಸ್ಯರುಗಳಾಗಿ ಸೇವೆ ಮಾಡುತ್ತಾ ಇರುವುದನ್ನು ಆ ರೀತಿ ಹೇಳಿದಂಥ ಸದಸ್ಯರುಗಳೇ ಅನುಭವಿಸಿದ್ದಾರೆ. ಆದ್ದರಿಂದ ಈ ಕಾನೂನನ್ನು ತರುವುದಕ್ಕಾಗಿ ಕಾಂಗ್ರೆಸ್ಸಿನವರಲ್ಲದೇ ಇರತಕ್ಕವರು ಭಯಪಡಬೇಕಾಗಿಲ್ಲ. ಅಲ್ಲದೇ ಈ ಕಾನೂನಿನಲ್ಲಿ ಸೂಚಿತವಾಗಿರತಕ್ಕಂಥ 15 ಕೈಗಾರಿಕೆಗಳನ್ನು ಮಾತ್ರ ಗ್ರಾಮ ಕೈಗಾರಿಕೆಗಳೆಂದು ಕರೆಯುತ್ತಾರೆ. ಇನ್ನುಳಿದ ಗ್ರಾಮಕೈಗಾರಿಕೆಗಳು ಇದರಲ್ಲಿ ಸೇರಿಲ್ಲ, ಅವುಗಳಿಗೆ ಲಕ್ಷ್ಯ ಕೊಡುತ್ತಾರೋ ಇಲ್ಲವೋ ಎಂದು ಶ್ರೀ ಶ್ರೀನಿವಾಸ ಅಯ್ಯಂಗಾರ್ ಅವರು ಅನುಮಾನಪಟ್ಟರು. 12 ನೆಯ ಪುಟದಲ್ಲಿ 33 ನೆಯ ಸೆಕ್ಷನ್ನಿನಲ್ಲಿ ತಿಳಿಸಿರುವ ಹಾಗೆ ಸರ್ಕಾರದವರು ಈ ಪಟ್ಟಿಯಲ್ಲಿ ಇನ್ನಷ್ಟು ಕೈಗಾರಿಕೆಗಳನ್ನು ಸೇರಿಸಬಹುದು. ಕೆಲವು ಕೈಗಾರಿಕೆಗಳನ್ನು ಬೇಕಾದರೆ ಬಿಡಬಹುದು ಎಂದು ಸೂಚನೆ ಕೊಟ್ಟಿದ್ದಾರೆ. ಮುಂದೆ ಈ ಸಂಸ್ಥೆಯವರು ಕಾರ್ಯಭಾರ ನಡೆಸುತ್ತಾ ನಡೆಸುತ್ತಾ ಯಾವಯಾವ ಕೈಗಾರಿಕೆಗಳನ್ನು ಸೇರಿಸಿಕೊಳ್ಳಬಹುದು ಅಥವಾ ಸದ್ಯದಲ್ಲಿರತಕ್ಕ ಯಾವುದನ್ನು ಬಿಡಬಹುದು ಎಂಬುದನ್ನೂ ಸೂಚಿಸಬಹುದು. ಈ ಖಾದಿ ಬೋರ್ಡ್ ನೇಮಕ ಮಾಡುವುದು ತಡವಾದದ್ದರಿಂದ ನಮಗೆ ಕೇಂದ್ರ ಸರ್ಕಾರದವರಿಂದ ಬರಬೇಕಾಗಿದ್ದ ಹಣ ಸಾಕಾದಷ್ಟು ಬರಲಿಲ್ಲ. ಅದಕ್ಕಾಗಿ ವಿಷಾದಪಡಬೇಕಾಗಿದೆ. ಈ ಬೋರ್ಡನ್ನು ರಚಿಸಬೇಕಾದರೆ ಕನಿಷ್ಠ ಪಕ್ಷ 15 ಜನ ಇರಬೇಕೆಂದು ಹೇಳುತ್ತಾರೆ. ನಾನು ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಉಚಿತವಾಗಿ ಕೊಡುತ್ತಾ ಇದ್ದೇನೆ. ಈ 15 ಜನರಲ್ಲಿ ಕನಿಷ್ಠ ಪಕ್ಷ 3 ಜನಕ್ಕಿಂತ ಹೆಚ್ಚಾಗಿ ಹರಿಜನರಿರಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತಾ ಇದ್ದೇನೆ. ಕಾರಣವೇನೆಂದರೆ ಈ ಗ್ರಾಮಕೈಗಾರಿಕೆಗಳಲ್ಲಿ ಒರಟು ಬಟ್ಟೆ ನೇಯತಕ್ಕವರೆಲ್ಲ ಹರಿಜನರೇ. ಒಳ್ಳೆಯ ನಯವಾದ ಬಟ್ಟೆಯನ್ನು ಕೆಲವರು ಮಾತ್ರ ಮಾಡುತ್ತಾ ಇದ್ದಾರೆ. ಆದ್ದರಿಂದ ಹೆಚ್ಚು ಜನ ಹರಿಜನರನ್ನು ಈ ಸಮಿತಿಯಲ್ಲಿ ನೇಮಿಸಿಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಹಳ್ಳಿಗಳಲ್ಲಿ ಚಾಪೆ ಹೆಣೆಯುತಕ್ಕವರು, ಚರ್ಮದ ಕೆಲಸ ಮಾಡತಕ್ಕವರು, ನಾರಿನ ಕೈಗಾರಿಕೆ ನಡೆಸತಕ್ಕವರು ಹೆಚ್ಚಾಗಿ ಹರಿಜನರೇ. ಈಗ ಇರತಕ್ಕ ಸ್ಥಿತಿಯಲ್ಲಿ ನಾರಿನ ಕೈಗಾರಿಕೆಗೆ ಸಾಕಾದಷ್ಟು ಪ್ರೋತ್ಸಾಹ ಇಲ್ಲ. ಈ ಬೋರ್ಡ್ ಕಾರ್ಯರೂಪಕ್ಕೆ ಬಂದಾಗ ಇವುಗಳನ್ನು ಸಾಕಾದಷ್ಟು ಪ್ರಚಾರ ಮಾಡಬೇಕು ಮತ್ತು ಶಾಸ್ತ್ರೀಯವಾಗಿ ತಯಾರುಮಾಡಿ, ಮಾರಾಟ ಮಾಡುವುದಕ್ಕೆ ಏರ್ಪಾಡು ಮಾಡುವುದನ್ನು ಈ ಬೋರ್ಡಿನವರು ಗಮನದಲ್ಲಿಟ್ಟುಕೊಳ್ಳಬೇಕು. ಈಗ ನಡೆಯುತ್ತಿರುವ ಕೈಗಾರಿಕೆಗಳು, ಎಷ್ಟೋ ತರಹದಲ್ಲಿ ಅಶಾಸ್ತ್ರೀಯವಾಗಿ ನಡೆಯುತ್ತಿವೆ. ಈಗಾಗಲೇ ಸರ್ಕಾರದವರು ಕೆಲವು ಕಡೆ ಸೋಪು ಮಾಡುವುದು, ನಾರಿನಿಂದ ಹಗ್ಗ ಮಾಡುವುದು, ಈ ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ. ಆದರೆ ಈ ರೀತಿ ತಯಾರು ಮಾಡಿದ ಪದಾರ್ಥಗಳನ್ನು ಮಾರುವುದು, ಅವುಗಳಿಂದ ಲಾಭ ಪಡೆಯುವ ಜನ ಜೀವನವನ್ನು ಸುಖಮಯ ಮಾಡಿಕೊಳ್ಳುವುದಕ್ಕೆ ಸಾಕಾದಷ್ಟು ಅನುಕೂಲ ಇಲ್ಲ, ಅದನ್ನೂ ಸಹ ಬೋರ್ಡಿನವರು ಗಮನದಲ್ಲಿಟ್ಟುಕೊಂಡು ಕೆಲಸಮಾಡಬೇಕೆಂದು ಹೇಳಿ ಈ ಖಾದಿ ಮತ್ತು ಗ್ರಾಮಕೈಗಾರಿಕೆಗಳ ಮಸೂದೆಯನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ ಮತ್ತು ಇದಕ್ಕಾಗಿ ಸರ್ಕಾರದವರನ್ನು ವಂದಿಸುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಅಧ್ಯಕ್ಷರೇ, ಶ್ರೀಮಾನ್ ಇಮಾಂ ಅವರು ಮತ್ತು ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್ ಅವರು ಮಾಡಿದಂಥ ವಾದದಲ್ಲಿ ತಿರುಳೇ ಇಲ್ಲ ಎಂದು ನಾನು ಖಂಡಿತ ಹೇಳುತ್ತೇನೆ. ಖಾದಿ ಮತ್ತು ಗ್ರಾಮೋದ್ಯೋಗದ ಬಿಲ್ಲು ಹಿಂದಿನ ಅಧಿವೇಶನದಲ್ಲಿ ಬಂದು ಸಭೆಯ ಒಪ್ಪಿಗೆಯನ್ನು ಪಡೆಯಿತು. ಆದರೆ ಕಾರಣಾಂತರಗಳಿಂದ ರಾಷ್ಟ್ರಾಧ್ಯಕ್ಷರ ಸಹಿ ಪಡೆಯದೇ ಇದ್ದ ಕಾರಣ ಪುನಃ ಈ ಅಧಿವೇಶನದಲ್ಲಿ ತರಬೇಕಾದ ಸಂದರ್ಭ ಬಂದಿದೆ. ಮಾನ್ಯ ಸದಸ್ಯರು ಹೇಳಿರತಕ್ಕ ಪಂಚವಾರ್ಷಿಕ ಯೋಜನೆಯನ್ನು ನಾನು ಒಪ್ಪಿದ್ದೇನೆ. ಈ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 2—3 ಕೋಟಿ ರೂಪಾಯಿಗಳ ಹಣವನ್ನು ಈ ಖಾದಿ ಮತ್ತು ಗ್ರಾಮ ಉದ್ಯೋಗಕ್ಕೆ ಒದಗಿಸಿದ್ದಾರೆ. ಆ 2—3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 50 ಲಕ್ಷ ಜನಕ್ಕೆ ಉದ್ಯೋಗವನ್ನು ಕಲ್ಪಿಸುತ್ತೇವೆಂದು ಆಲ್ ಇಂಡಿಯಾ ಬೋರ್ಡಿನವರು ಒಂದು ಸ್ಕೀಂ ಕೊಟ್ಟಿದ್ದಾರೆ. ಒಂದು ಕಡೆ

4,900 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 50 ಲಕ್ಷ ಜನಕ್ಕೆ ಉದ್ಯೋಗ ಕಲ್ಪಿಸಿಕೊಡಬೇಕು ಎಂಬ ಒಂದು ಪ್ಲಾನ್ ಹೀಗೆ ಇದೆ. 4,900 ಕೋಟಿ ರೂಪಾಯಿಗಳ ಹಣಕ್ಕೆ 50 ಲಕ್ಷ ಜನರಿಗೆ ಉದ್ಯೋಗ, 2 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಈ ಖಾದಿ ಮತ್ತು ಗ್ರಾಮ ಉದ್ಯೋಗದ ಕೆಲಸದಲ್ಲೂ 50 ಲಕ್ಷ ಜನಕ್ಕೆ ಉದ್ಯೋಗ. ಇದನ್ನು ನಾವು ಪರಿಶೀಲನೆ ಮಾಡಿದರೆ ಖಾದಿ ಮತ್ತು ಗ್ರಾಮೋದ್ಯೋಗದಲ್ಲಿ, ಕಡಮೆ ಹಣದಲ್ಲಿ ಹೆಚ್ಚು ಜನಗಳಿಗೆ ಉದ್ಯೋಗವನ್ನು ಕಲ್ಪಿಸಬಹುದು ಎಂಬುದನ್ನು ಕಂಡುಕೊಳ್ಳಬಹುದು. ಇದು ಬಹು ಮುಖ್ಯವಾದ ವಿಷಯ. ಹಳ್ಳಿಗಳಲ್ಲಿರತಕ್ಕ ಜನ 3—4 ತಿಂಗಳು ರೈತಾಪಿ ಕಸಬನ್ನು ಮಾಡಿಕೊಂಡು ತಮ್ಮ ಹಳ್ಳಿಯಲ್ಲಿ ಬೇರೆ ಯಾವ ಉಪಕಸಬನ್ನು ಮಾಡಲಿಕ್ಕೆ ಅವಕಾಶವಿಲ್ಲದೆಯಿರತಕ್ಕ ಸಂದರ್ಭದಲ್ಲಿ ಅವರಿಗೆ ಉದ್ಯೋಗವನ್ನು ಕಲ್ಪಿಸಬೇಕೆಂಬ ಉದ್ದೇಶವು ಬಹು ಮುಖ್ಯವಾದದ್ದು. ಹಿಂದೂಸ್ಥಾನದಲ್ಲಿ ನಾವು 6 ಕೋಟಿ ರೂಪಾಯಿಗಳಷ್ಟು ಚರ್ಮವನ್ನು ಪರದೇಶಗಳಿಗೆ ರವಾನೆ ಮಾಡುತ್ತಿದ್ದೇವೆ. 6 ಕೋಟಿ ರೂಪಾಯಿಗಳಷ್ಟು ಚರ್ಮವನ್ನು ನಮ್ಮ ದೇಶದಲ್ಲಿಯೇ ಹದಮಾಡಿದ್ದೇ ಆದರೆ 10—15 ಕೋಟಿ ರೂಪಾಯಿಗಳಷ್ಟು ಹಣ ಸಂಪಾದನೆ ಮಾಡಬಹುದು. ಮತ್ತು ಅನೇಕ ಜನಗಳಿಗೆ ಉದ್ಯೋಗವನ್ನು ಕಲ್ಪಿಸಬಹುದು. ಕಾಡಿನಲ್ಲಿ ಅನೇಕ ಸಾಮಗ್ರಿಗಳು ಹಾಳಾಗುತ್ತಿವೆ. ಅವನ್ನು ನಾವು ಉಪಯೋಗ ಮಾಡುತ್ತಾ ಇಲ್ಲ. ಅವನ್ನು ಉಪಯೋಗ ಮಾಡಿಕೊಂಡು ನಮ್ಮ ಆಸ್ತಿಯನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಈ ಉದ್ಯೋಗ ಬಹು ಮುಖ್ಯವಾದುದು. ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 30 ಕೋಟಿ ಗಜ ಬಟ್ಟೆ ತಯಾರು ಮಾಡುವುದಕ್ಕೆ ಈ ಖಾದಿ ಮತ್ತು ಗ್ರಾಮೋದ್ಯೋಗಗಳಿಗಾಗಿ ಹಣವನ್ನು ಒದಗಿಸಿದ್ದಾರೆ. ಅಂಬರ್ ಚರಖಾ ಸ್ಕೀಂನ ಭಾರತಕ್ಕೆ 300 ಕೋಟಿ ಗಜ ಬಟ್ಟೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಉತ್ಪನ್ನಮಾಡಬೇಕೆಂದು ಒಂದು ಸ್ಕೀಮನ್ನು ಇಟ್ಟಿದ್ದಾರೆ. ಈ ಖಾದಿ ಮತ್ತು ಗ್ರಾಮೋದ್ಯೋಗದ ಬಾಬು ನಾಲ್ಕು ವರ್ಷಗಳ ಕಾಲದಿಂದ ನಮ್ಮ ದೇಶದಲ್ಲಿ ಇಲ್ಲದೇ ಹೋದದ್ದರಿಂದ 10—20 ಲಕ್ಷ ರೂಪಾಯಿಗಳ ಗ್ರಾಂಟು ಮತ್ತು ಸಾಲ ನಮ್ಮ ಮೈಸೂರು ದೇಶಕ್ಕೆ ಬರುತ್ತಿದ್ದುದು ಸಿಕ್ಕದೇ ಹೋಯಿತು. ಈಗಲೂ ಕೂಡ ತಡವಾಗಿದೆ. ಮುಂದಿನ ಮೂರು ತಿಂಗಳಿನಲ್ಲಾದರೂ ಈ ಬೋರ್ಡ್‌ನ್ನು ರಚನೆ ಮಾಡಿದ್ದೇ ಆದರೆ, ಪ್ರತಿ ವರ್ಷ ಕೇಂದ್ರ ಸರ್ಕಾರದವರು ಏರ್ಪಡಿಸಿರತಕ್ಕ 6 ಕೋಟಿ ರೂಪಾಯಿಗಳ ಈ ಫಂಡಿನಿಂದ ಮೈಸೂರು ಸ್ಟೇಟಿಗೆ ಸುಮಾರು 10-20 ಲಕ್ಷ ರೂಪಾಯಿಬರತಕ್ಕ ಹಣ ಏನಿದೆ ಅದು ಬರುವುದರಲ್ಲಿ ಯಾವ ಅನುಮಾನವೂ ಇಲ್ಲ. ಇದುವರೆಗೂ ಮೈಸೂರು ಸಂಸ್ಥಾನದಲ್ಲಿ ಇದ್ದಂಥ ಬೋರ್ಡು ಸಲಹಾ ಸಮಿತಿ ಆಗಿತ್ತು. ಸಲಹಾ ಸಮಿತಿ ತೀರ್ಮಾನ ಮಾಡುವುದನ್ನು ಸರ್ಕಾರ ಅಂಗೀಕಾರ ಮಾಡುತ್ತಿರಲಿಲ್ಲ. ಆದ್ದರಿಂದ ಆಲ್ ಇಂಡಿಯಾ ಖಾದಿ ಮತ್ತು ಗ್ರಾಮೋದ್ಯೋಗದ ಬೋರ್ಡಿನವರು ಮೈಸೂರು ಸಂಸ್ಥಾನದಲ್ಲಿರತಕ್ಕ ಈ ಬೋರ್ಡನ್ನು ಸ್ಟ್ಯಾಚ್ಯುಟರಿ ಬೋರ್ಡ್ ಆಗಿ ಮಾಡಬೇಕು, ಆರೀತಿ ಮಾಡಿದರೆ ಅವರ ಸಿಫಾರಸಿಗೆ ಮಾನ್ಯತೆ ಇರುತ್ತದೆಯೇ ವಿನಾ ಸಲಹಾ ಸಮಿತಿ ಆದರೆ ಅವರ ಸಿಫಾರಸನ್ನು ಒಪ್ಪುವುದಿಲ್ಲ ಎಂದು ಹೇಳಿದನಂತರ ಮೈಸೂರು ಸರ್ಕಾರದವರು ಪರಿಶೀಲನೆ ಮಾಡಿ ಈ ಖಾದಿ ಮತ್ತು ಗ್ರಾಮೋದ್ಯೋಗದ ಬೋರ್ಡನ್ನು ಸ್ಟ್ಯಾಚ್ಯುಟರಿ ಬೋರ್ಡನ್ನಾಗಿ ಮಾಡಲು ಈ ಮಸೂದೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತೇನೆ. ಕೆಲವು ಜನ ಟೀಕಾಕಾರರು ಕಾಂಗ್ರೆಸ್ಸಿನವರು ಮಾತ್ರ ಖಾದಿ ಬಟ್ಟೆಯನ್ನು ಹಾಕುತ್ತಾರೆ ಎಂದು ಹೇಳಿದರು. ಹಳ್ಳಿಗಳಲ್ಲಿ ಸುಮಾರು 100ಕ್ಕೆ 75 ಜನ ಈ ಉದ್ಯೋಗವನ್ನು ಕೈಕೊಂಡಿರತಕ್ಕವರು ಈ ಬಟ್ಟೆಯನ್ನೇ ಉಡುತ್ತಾ ಇದ್ದಾರೆ. ಇವತ್ತು ಅಸೆಂಬ್ಲಿ ಮೆಂಬರಾಗಿರತಕ್ಕವರು ಇಲ್ಲಿ ಒಬ್ಬರು ಮಾತ್ರ ಕಾಣಿಸುತ್ತಿರಬಹುದು, ಆದರೆ ಹಳ್ಳಿಯಲ್ಲಿರತಕ್ಕ ಸಹಸ್ರಾರು ಜನ ಸ್ವಾವಲಂಬನದಿಂದ ಜೀವನ ನಡೆಸುವ ಈ ಉದ್ಯೋಗವನ್ನು ಕೈಕೊಂಡಿದ್ದಾರೆ. ನಮ್ಮ ದೇಶಕ್ಕೆ ಬಟ್ಟೆ ಪರದೇಶದಿಂದ ಬರುತ್ತಾ ಇತ್ತು. ನಿಜ. ಆದರೆ ಭಾರತದಿಂದ ಇವತ್ತು ವರ್ಷಕ್ಕೆ 120 ಕೋಟಿ ರೂಪಾಯಿಗಳಷ್ಟು ಮಿಲ್ ಬಟ್ಟೆಯನ್ನು ಪರದೇಶಕ್ಕೆ ರವಾನೆ ಮಾಡುತ್ತಾ ಇದ್ದಾರೆ. ಭಾರತದಲ್ಲಿ ಹತ್ತಿ ಬೆಳೆಯುತ್ತಿರುವವರು, ನಾವು. ಬಟ್ಟೆ ತಯಾರು ಮಾಡುವುದನ್ನು ಅವರಿಗೆ ಕಲಿಸಿಕೊಟ್ಟವರು ನಾವು. ಹಾಗಿದ್ದೂ ಕೂಡ ಪರಕೀಯರ ಮಿಲ್ ಬಟ್ಟೆಯನ್ನು ಹಾಕಿಕೊಂಡು ನಾವು ಬೆಳೆಸಿದ ನಮ್ಮ ಕೈಗಾರಿಕೆಯನ್ನು ಹಾಳುಮಾಡಿದ್ದೇವೆ. ಹಳ್ಳಿಯಲ್ಲಿರತಕ್ಕ ಜನಗಳಿಗೆ ಉದ್ಯೋಗವನ್ನು ಕಲ್ಪಿಸಿಕೊಡಲು ಇದನ್ನು ಬಿಟ್ಟು ಬೇರೆ ಯಾವ ಮಾರ್ಗವೂ ಇಲ್ಲ. ಸರ್ಕಾರದವರು ಇನ್ನಾವುದಾದರೂ ಯೋಜನೆಯನ್ನು ತಯಾರುಮಾಡುವುದಾದರೆ ಅದರಿಂದ ಖಂಡಿತ ಪ್ರಯೋಜನವಾಗುವುದಿಲ್ಲ. ನಾನು ಚಾಲೆಂಜ್ ಮಾಡುತ್ತೇನೆ. ಖಾದಿ ಮತ್ತು ಗ್ರಾಮೋದ್ಯೋಗ ಬಿಟ್ಟರೆ ಇನ್ನಾವ ಉಪಕಸಬನ್ನೂ ಒದಗಿಸುವುದಕ್ಕೆ ಸಾಧ್ಯವಿಲ್ಲ. ಇದನ್ನು ಯಾರೂ ಸರಿಯಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಫ್ರಾನ್ಸ್ ಅಥವಾ ಇಂಗ್ಲೆಂಡಿನಲ್ಲಿ ತಯಾರಾಗದೆ ನಮ್ಮ ಹಳ್ಳಿಗಳಲ್ಲಿ ತಯಾರಾಗುವ ಪದಾರ್ಥಗಳನ್ನು ಬಳಸುವುದಕ್ಕೆ ನಮವರಿಗೆ ಮನಸ್ಸಿಲ್ಲ. ಕಾನೂನಿಗೆ ವಿರುದ್ಧವಾಗಿ ಈ ಸಭೆಯಲ್ಲಿ ಮಾತನಾಡುತ್ತಿದ್ದಾರೆ. ಅದನ್ನು ಖಂಡಿಸಬೇಕು, ಅವರ ಭಾಷಣದಲ್ಲಿ ತಿರುಳಿಲ್ಲ ಎಂದು ಹೇಳುತ್ತಿದ್ದೇನೆ. ಖಾದಿ ಮತ್ತು ಗ್ರಾಮ ಕೈಗಾರಿಕೆಯ ಬೋರ್ಡ್ ಆಗತಕ್ಕದ್ದು ಕಾಂಗ್ರೆಸ್ಸಿನವರಿಗಾಗಿ ಅಲ್ಲ, ಗ್ರಾಮದ ಜನರಿಗಾಗಿ. ಇದರಲ್ಲಿ ಸುಮಾರು 10-12 ಕೈಗಾರಿಕೆಗಳಿವೆ. ಬಿದರಿನ ಕೈಗಾರಿಕೆಯಿದೆ, ಬಿದರನ್ನು ಮನೆಕಟ್ಟುವುದಕ್ಕೆ ಉಪಯೋಗಿಸಬಹುದು. ಜಪಾನ್ ದೇಶದಲ್ಲಿ ಭಾರತದಿಂದ ಬೊಂಬಿನ ಸಸಿಗಳನ್ನು ತೆಗೆದುಕೊಂಡು ಹೋಗಿ ಸುಮಾರು 100-150 ತರಹ ಗಳುಗಳನ್ನು ತಯಾರಿಸಿ ಅದನ್ನು ಮಾರಾಟ ಮಾಡುತ್ತಾ ಧನ ಸಂಪಾದಿಸುತ್ತಿದ್ದಾರೆ. ಅದೇ ರೀತಿ ನಮ್ಮಲ್ಲೂ ಬೊಂಬಿನ ಕೈಗಾರಿಕೆ ನಡೆಸಿದರೆ ಆದಾಯ ಪಡೆಯಬಹುದು. ಆಮೇಲೆ ಜೇನು ತುಪ್ಪ ಶೇಖರಿಸುವ ಕೆಲಸವಿದೆ. ಕಾಡಿನಲ್ಲಿ ಎಷ್ಟೋ ಜೇನು ತುಪ್ಪ ಹಾಳಾಗುತ್ತಿದೆ. ಅದನ್ನು ಸಂಗ್ರಹಿಸಿ ಮಾರಾಟ ಮಾಡಿ ಅನುಕೂಲ ಪಡೆಯಬಹುದು. ಇದರಿಂದ ಅನೇಕರಿಗೆ ಉದ್ಯಮವೂ ದೊರಕಿದಂತಾಗುತ್ತದೆ. ಹಾಗೆಯೇ ಸ್ಮಿತಿ, ಕಾರ್ಪೆಂಟ್ರಿ ಮುಂತಾದ ಗ್ರಾಮ ಕೈಗಾರಿಕೆಗಳಿವೆ. ಇದಕ್ಕೆಲ್ಲ ಬೋರ್ಡ್ ಆಗುವುದು ಅವಶ್ಯಕ. ಈ ಬೋರ್ಡಿನಲ್ಲಿ ಯಾರಿಗೆ ನಂಬಿಕೆಯಿದೆಯೋ ಅವರೇ ಸದಸ್ಯರಾಗಬೇಕೆಂದು ಪ್ರಾರ್ಥಿಸಿ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಕಡೆಯಿಂದ ನಾನು ಒಂದೆರಡು ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು.—ನಾನೊಂದು ಅರಿಕೆ ಮಾಡಿಕೊಳ್ಳುತ್ತೇನೆ. ಕೊಟ್ಟ ವಚನ ಪಾಲಿಸಬೇಕೆ? ಬೇಡವೆ? $5\frac{1}{2}$ ಗಂಟೆಗೆ ಮುಗಿಸಬೇಕೆಂದು ವಚನ ಕೊಟ್ಟಿದ್ದಾಗಿದೆ, ನಾನು ಎಷ್ಟು ಹೊತ್ತು ಬೇಕಾದರೂ ಕೂಡಲು ಸಿದ್ಧ.

(ಅಧ್ಯಕ್ಷರು.)

ಮಾತನಾಡುವವರು ಇದ್ದರೆ ಮಾತನಾಡಬಹುದು, ನಾನು ಕೇಳಲು ಸಿದ್ಧನಾಗಿದ್ದೇನೆ. ಆದರೆ ಅದರಿಂದ ಉಪಯೋಗವಾಗಬೇಕು. ಹಾಗಾಗದಿದ್ದರೆ ಹೆಚ್ಚು ಕಾಳಿತು ಕೊಳ್ಳುವುದು ಅಷ್ಟು ಪ್ರಯೋಜನಕಾರಿಯಾಗಲಿಕ್ಕಿಲ್ಲ.

*Sri C. M. POONACHA.—Sir, it is very gratifying to note that there has been a very large measure of agreement and wholehearted support to the Bill as presented to this House. In the course of detailed examination by every Hon'ble Member, very many suggestions have been made. Very many useful and constructive suggestions also have been made. Government will certainly bear in mind those suggestions at the time of constituting the Board. They will certainly bear in mind those suggestions and will give due representation to competent persons who can efficiently administer the Board. Naturally, the various interests will be given due representation on that Board.

One or two doubts were expressed by the Hon'ble the Leader of the Opposition and Sri Srinivasa Iyengar. There seems to be a lurking fear in the minds of these Hon'ble Members that to a large extent the administration of this Board will be confined to certain members of a particular political party. Sri Imam clearly said that this was a partisan affair. I for one think that too much is read into the spirit of the measure that is placed before this House. It is not proper that we should view every measure that is placed by the Government with our own biassed views. At least in matters like this, it is necessary that we should adopt a more dispassionate and unbiassed attitude. To think that everything is going to be merely for the benefit of the Congress Party is perhaps not very kind and I think that such an attitude should not be taken up against a measure of this kind. This is a measure which primarily seems to promote the development of village industries and khadi. Khadi is the guiding spirit of village industries. I do not want to dilate upon this point in detail. Khadi does not mean just spinning khadi and wearing khadi. There is a spirit behind khadi. There is a definite philosophy behind khadi. It connotes and denotes ever so many things. We always choose to quote Mahatma Gandhi in ever so many things. For instance, we quote his philosophy, his teachings and particularly his efforts in the direction of promotion of khadi. The propogation of khadi cult has a significant philosophy behind it which means not only the development of khadi industry as such or the wearing of khadi, but also the essential spirit of swadeshi, the promotion of rural industries and the essential requirement of self-help. So, the khadi spirit is built up on these sound principles and it is in that spirit that this measure or the development of various industries enumerated in the schedule attached to this Bill will have to be looked into. For that purpose, let us just try to understand the real implications underlying this Bill.

This Bill proposes to develop certain village industries. It may be that a few more could be added or one or two may be removed. But by and large these are the industries in which our agricultural population is engaged every day all round the year. We know the condition of our agriculturists, peasants and working class. I need not dilate on this point now. At present, our agricultural economy is not satisfactory. It will have to be supplemented by a variety of other village crafts. Such of those industries which are allied to our main occupation of agriculture will have to be seriously thought of and necessary plan will have to be prepared and implemented to develop those industries which go to assist our agriculturists, who, as we all

5-30 P. M.

know, are not by themselves idle, but there is something like enforced idleness during certain parts of the year. So it is necessary for us to find out certain kinds of industries through which they would be able to earn something. It is not as if the industries are not there, but, unfortunately, sufficient effort in that direction has not been made to develop

these industries and to follow them as an occupation. Therefore, there should be a body corporate, or whatever it is, which will take up this responsibility and pursue this particular problem with vigour. Then and then alone we would be able to augment the village economy to a greater extent. That is the purpose behind this Bill. It is not the idea that we should have only industries and only they should be developed. Industries by themselves would not improve the economic structure of our society. They should be developed side by side with agriculture also.

Sir, these are the basic points underlying the measure that is before the House. If we approach from that point of view, then it would be evident to us that for such a Board we should have at the helm of affairs people with that particular bent of mind, who have that particular aptitude and who are capable of administering this Board efficiently and following it up not only with vigour but also with a certain amount of sincerity. Therefore, Sir, certain qualifications have been prescribed. Qualifications, when prescribed, are never said to be discriminatory. My Hon'ble friend, Sri Imam, felt that this was a sort of discrimination. If qualifications prescribed should amount to discrimination, then very many things cannot be thought of. Even my coming to this Assembly is subject to certain qualifications. Even when you invite applications to fill up a certain post, certain qualifications are prescribed. So prescribing qualifications can never amount to discrimination and should not be taken as discrimination. The qualification regarding wearing of khadi is supposed to be a discrimination.

Sri J. MOHAMED IMAM.—Penalisation.

Sri C. M. POONACHA.—Far from it. I do not know how many friends here feel that it amounts to penalisation. No doubt, there is a certain element of sacrifice in a person wearing khadi habitually. But, so far as wearing of khadi is concerned, it does not mean that only Congressmen will be there in the Board because of this qualification. There is a very large percentage of men in our State who are wearing khadi and who are not Congressmen I should say that the most stout and staunch opponents of the Congress today are those who wear khadi habitually. It is not as if only Congressmen are trying to promote themselves into this Board by means of the qualifications that have been prescribed. I have looked into similar enactments in Bihar and other States and I find that those Acts, also contain the same qualification The wearing of khadi, as I was trying to mention earlier, has a sort of philosophy behind it. Without that aptitude and bent of mind, certain things cannot be done. It is, therefore, necessary that the people who are entrusted with a responsibility of this nature should be with that particular bent of mind. It is, therefore, essential that qualifications should be not only prescribed, but insisted upon very rigorously. If we have not been able to achieve ever so many things, it is because such rigorous qualifications were not insisted upon. So this is a very salutary measure in this direction and it is necessary that these qualifications should be retained. Even in the Central Act qualifications are there, though they have not been prescribed precisely as we have done. It is said in that Act that Government shall appoint only such persons who have this particular aptitude and capacity. Of course, the decision as to whether that particular aptitude is there or not is left to the Government. Government can decide for themselves whether X or Y is qualified. Instead of adopting such a procedure, we have by this Bill made the qualifications statutory. That is all.

Sir, there has been criticism with respect to this particular point only. By and large the other provisions seem to be acceptable to the House and so I need not take the precious time of the House any more. I commend my motion for the acceptance of the House.

Mr. SPEAKER.—The question is—

"That the Mysore Khadi and Village Industries Board Bill, 1956, be considered."

The motion was adopted.

Sri L. K. SHROFF.—I am not going to move any of my amendments.

Mr. SPEAKER.—Then I will put the whole Bill to the House.

The question is—

"Clauses 2 to 35, the Schedule, Clause 1, the Title and the Preamble stand part of the Bill."

The motion was adopted.

Clauses 2 to 35, the Schedule, Clause 1, the Title and the Preamble were added to the Bill.

Motion to pass.

Sri C. M. POONACHA.—Sir, I beg to move;

"That the Mysore Khadi and Village Industries Board Bill. 1956, be passed."

Mr. SPEAKER.—The question is—

"That the Mysore Khadi and Village Industries Board Bill, 1956, be passed."

The motion was adopted.

Mr. SPEAKER.—Now it is time for the House to rise. The House now rises and will meet tomorrow at 12 noon.

The House adjourned at Forty minutes past Five of the Clock to meet again at Twelve of the Clock on Thursday, the 27th December 1956.